# ಸಂಗ್ಯಾಬಾಳ್ಯಾ ಅನಬೇಕೊ ನಾಡೊಳಗ

## ಮುನ್ನುಡಿ

“ಸಂಗ್ಯಾಬಾಳ್ಯಾ”, ನಡೆದ ಘಟನೆಯನ್ನು ಬಯಲಾಟವಾಗಿಸಿದ ಜಾನಪದ ರೂಪಕ. ಹಾಡುಗಳ ಜನಪ್ರಿಯ ಧಾಟಿಗಳು ಹಾಗೂ ನಡೆದ ಘಟನೆಯ ಆಧಾರದ ಬಯಲಾಟವೆಂಬುದರಿಂದಾಗಿ ಇದು ಮಿಂಚಿನ ವೇಗದಲ್ಲಿ ಜನಪ್ರಿಯವಾಯಿತು. ಬೆಳಗಾವಿ ಬಳಿಯ ಅಲತಗಿ ಎಂಬ ಹಳ್ಳಿಯಲ್ಲಿ ಇದರಲ್ಲಿ ಬರುವ ವೃತ್ತಿಪರ ‘ಗಂಗಾ’ನ ಪಾತ್ರಧಾರಿ ಸ್ತ್ರೀಯರು ಸಿಗುತ್ತಿದ್ದರು. ಸ್ವಾತಂತ್ರ್ಯ ಪೂರ್ವದಲ್ಲಿ ಪ್ರಚಾರದಲ್ಲಿದ್ದ ಈ ಬಯಲಾಟ ಅಂದಿನ ಸರಕಾರದ ಅವಕೃಪೆಗೂ ಪಾತ್ರವಾಯಿತು. ಆದರೆ ಕದ್ದಾಡುವುದನ್ನು ನಿಲ್ಲಿಸಲಾಗಲಿಲ್ಲ. ಆಟ ಇನ್ನಷ್ಟು ಪ್ರಚಾರವಾಯಿತು.

ಬಹುಶಃ ಆಟವನ್ನು ನಿಷೇಧಿಸಲು ಕೊಲೆಯೊಂದೇ ಕಾರಾಣವಾಗಿರಲಾರದು. ಸಂಗ್ಯಾನನ್ನು ಆರಾಧನೆಯೆಂತೆ ಭಯಂಕರವಾಗಿ ಅಭಿನಯಿಸುವುದೇನೋ ಸರಿಯೆ, ಆದರೆ ಸಂಗ್ಯಾನನ್ನು ಕೊಂದ ಮೇಲೆ ಈರ್ಯನ ಪಾತ್ರಧಾರಿ ಸರಕಾರವನ್ನು ಟೀಕಿಸುವ ಸಂಭಾಷಣೆಯನ್ನು ಹೇಳುತ್ತಿದ್ದನಂತೆ. ಅದರಿಂದಾಗಿ ಈ ಬಯಲಾಟ ನಿಷೇಧಕ್ಕೊಳಗಾಯಿತೆಂದೂ ಹೇಳುವವರಿದ್ದರು. “ಸಂಗ್ಯಾ ಊರೊಳಗ ಕಾಳಗ ಆಗಿದ್ದ; ಕೊಂದಿವಿ. ಆದರ ಕೆಟ್ಟ ಇಂಗರೇಜಿ ಸರಕಾರಕ್ಕೆ ತಿಳಿಸಿ ಹೇಳೋದ ಹೆಂಗಾ?” ಎಂಬರ್ಥ ಬರುವ ಮಾತು ಅದು. ಈರ್ಯಾ ಅಂದನೋ ಬಿಟ್ಟನೋ ಆಡುವವರು  ಮಾತ್ರ ಈ ಮೂಲಕ ಬ್ರಿಟಿಷ್ ಸರಕಾರಕ್ಕೆ ಜಾನಪದರ ಪ್ರತಿಭಟನೆಯಾಗಿಯೇ ಆಡುತ್ತಿದ್ದರು. ಬರಬರುತ್ತ ಆಟದ ಕೊನೆ ಇಂಥ ಪ್ರತಿಭಟನೆಯಿಂದ ದೀರ್ಘವಾಗಿರುತ್ತಿತ್ತೆಂದೂ ಜನ ನನಗೆ ಹೇಳಿದರು. ಈ ಬಯಲಾಟವನ್ನು ನಿಷೇಧಿಸಿದ ಸರಾಕಾರೀ ಆಜ್ಞೆ ಸಿಕ್ಕುವುದೇ ಎಂದು ಪ್ರಯತ್ನಿಸಿದೆ; ಅದೂ ಸಿಕ್ಕಲಿಲ್ಲ.

ಇದು ಮೂಲ ಶ್ರೀ ಪತ್ತಾರ ಕವಿ ಹಾಡುಗಳಲ್ಲಿ ರಚಿಸಿದ ಸಂಗ್ಯಾ ಬಾಳ್ಯಾ ಬಯಲಾಟಕ್ಕೆ ಸಂಭಾಷಣೆ ಸೇರಿಸಿ ಆಧುನಿಕ ರಂಗಭೂಮಿಗೆ ಪರಿವರ್ತಿಸಿಕೊಂಡ ಅಳವಡಿಕೆ. ಹೀಗೆ ಮಾಡಲು ನನ್ನನ್ನು ಕೇಳಿಕೊಂಡವರು ಮತ್ತು ತಮ್ಮ ಪ್ರತಿಮಾ ರಂಗದಿಂದ ಪ್ರಯೋಗಿಸಲು ಅವಕಾಶ  ಕಲ್ಪಿಸಿಕೊಟ್ಟವರು ಶ್ರೀ ಲಂಕೇಶ್ ಮತ್ತು ಮರಳಸಿದ್ಧಪ್ಪ ಅವರು. ಇವರಿಬ್ಬರ ಒತ್ತಾಸೆ ಇಲ್ಲದಿದ್ದಲ್ಲಿ  ಈ ಆಳವಡಿಕೆಯ ಕಲ್ಪನೆಯೇ ನನಗೆ ಬರುತ್ತಿರಲಿಲ್ಲ. ಅವರಿಗೂ ಹಾಗೂ ಇದನ್ನು ಪ್ರಕಾಶಪಡಿಸುತ್ತಿರುವ ಶ್ರೀ ಪ್ರಕಾಶ್ ಕಂಬತ್ತಳ್ಳಿ ಅವರಿಗೂ ವಂದನೆಗಳು.

**ಚಂದ್ರಶೇಖರ ಕಂಬಾರ**

## ರಂಗ ಮಂಚಕ ಹೋಗೋಣು ನಡಿ

ಪರಮ್ಮ : ಈ ಮಾತು ಖರೆ ಹೌಂದಲ್ಲ?

ಗಂಗಿ : ಖರೆ ನೋಡ
*(ಸಂಗ್ಯಾ ಬಾಳ್ಯಾ ಬರುವರು. ಸಂಗ್ಯಾ ವಿಶೇಷ ಶಿಂಗಾರಾಗಿದ್ದಾನೆ.)*

ಬಾಳ್ಯಾ : ಗೆಳೆಯಾ ಸಂಗಣ್ಣಾ, ಲಗಳೇರ ಮನೀತನಕ ಅಂತೂ ಬಂದಿವಿ, ಶಿವಪೂಜೆ ಒಳಗ ಕರಡಿ ಬಿಟ್ಟಾಂಗ ನಾ ಯಾಕ ಬರಲಿ? ನಾ ಹೋಗತೇನು. ನೀ ಒಳಗ ಹೋಗುವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣಾ, ಜೀವಕ್ಕೆ ಯಾಕೋ ಸ್ಥಿರಾರ ಇಲ್ಲಧಾಂಗ ಆಗೇತಿ. ನಾ ಒಬ್ಬsi ಅವರ ಮನಿ ಹೊಕ್ಕರ ಮಂದಿಗೆ ಸಂಶೆ ಬರತೈತಿ. ನೀ ಇದ್ದರ ನನಗೂ ಧೈರ್ಯ ಇರತೈತಿ. ಒಳಗ ಬಂದ ಎಲಿ ಅಡಿಕಿ ಸುಣ್ಣ ತಿಂದ ಹೋಗೀಯಂತ. ಬರುವಂಥವನಾಗು.

ಬಾಳ್ಯಾ : ಹಂಗಾದರ ನಡಿ ಗೆಳೆಯಾ ಹೋಗೋಣು.
*(ನಡೆಯುವರು. ಬಾಳ್ಯಾ ಪ್ರೇಕ್ಷಕರ ಕಡೆ ಮುಖಮಾಡಿ ಯಾರಾದರೂ ಗಮನಿಸುತ್ತಿದ್ದಾರಯೇ — ಎಂದು ನೋಡುತ್ತಿರುವನು. ಗಂಗಿ ಬಂದು ಇಬ್ಬರನ್ನೂ ಎದುರ್ಗೊಳ್ಳುವಳು)*

ಗಂಗಿ : ಸೂರ್ಯ ಚಂದ್ರನ ಸರಿ ಸಿಕ್ಕಿಯೊ ದೋರಿ! ಸಂಗ್ಯಾ ಒಳಗ ಬರುವಂಥವರಾಗರಿ. ಬಡವ ಬಾಳ್ಯಾ ನೀನೂ ಬಂದೇನು? ಒಳಗ ಬರುವಂಥವನಾಗು.

ಸಂಗ್ಯಾ : ಗಂಗಾ ನಾನಾದರು ಒಳಗೆ ಬಂದೇನ್ನೋಡು.

ಬಾಳ್ಯಾ : ಏನವಾ ತಂಗಿ, ನಾನಾದರು ಒಳಗೆ ಬಂದೇನ್ನೋಡು.

ಗಂಗಿ : ಸಂಗ್ಯಾ, ನೀರ ಕಾದಾವ, ಗಂಧದ ಸಾಬಾನ, ನಾರೋ ಎಣ್ಣಿ ಹಚ್ಚಿ ಜಳಕಾ ಮಾಡುವಂಥವರಾಗರಿ. ಬಡವ ಬಾಳ್ಯಾ, ದನದ ಹಕ್ಕಿಗಿ ಹೋಗಿ ಕೈ ತೊಳ ಕೊಂಬರುವಂಥವನಾಗು.

ಸಂಗ್ಯಾ : ಗಂಗಾ ನಾನಾದರು ಜಳಕಾ ಮಾಡೇನ್ನೋಡು.

ಬಾಳ್ಯಾ : ಏನವಾ ತಂಗಿ, ನಾನಾದರು ದನದ ಹಕ್ಯಾಗ ಕೈ ತೊಳಕೊಂಡೇನ್ನೋಡು.

ಗಂಗಿ : ಸಂಗ್ಯಾ ನಡುಮನ್ಯಾಗ ಬಣ್ಣದ ಮಣೆ ಹಾಕೇನಿ; ಮುಂದ ಅಡ್ಡಣಗಿ ಇಟ್ಟೇನಿ. ಊಟಕ್ಕ ಕೂರುವಂಥವರಾಗಿರಿ. ಬಾಳ್ಯಾ, ಅಲ್ಲೇ ಹೊರಗ ಮೇವಿನ ಕಟ್ಟೀ ಹಂತ್ಯಾಕ ಕೂರುವಂಥವನಾಗು.

ಸಂಗ್ಯಾ : ಎಲೇ ಗಂಗಾ, ನಾನಾದರು ಬಣ್ಣದ ಮಣೆಮ್ಯಾಗ ಕುಂತಿದ್ದೇನ್ನೋಡು.

ಬಾಳ್ಯಾ : ಏನವಾ ತಂಗಿ, ನಾನಾದರು ಮೇವಿನ ಕಟ್ಟೀ ಹಂತ್ಯಾಕ ಕುಂತಿದ್ದೇನ್ನೋಡು.

ಗಂಗಿ : ಸಂಗ್ಯಾ, ಎಳಿ ಎಳಿ ಶಾವಿಗಿ, ಚೆನ್ನೀ ಸಕ್ಕರಿ, ಮ್ಯಾಲ ಸಣ್ಣಕ್ಕಿ ಅನ್ನ, ಕರಚೀಕಾಯಿ ಐದಾರಾ, ಅದರಾಗ ತುಪ್ಪ ಒಂದ ಸೇರಾ — ಚೆನ್ನಾಗಿ ಊಟಾ ಮಾಡರಿ. ಬಡವ ಬಾಳ್ಯಾ. ಪುಂಡೀಪಲ್ಲೆ, ರಾಗೀರೊಟ್ಟಿ, ತಂಗಳನ್ನ ನೀರಾಸಾರಾ — ಚೆನ್ನಾಗಿ ತಿನ್ನುವಂಥವನಾಗು.
*(ಏನೊ ನೆನಪಾಗಿ ಸಡಗರದಿಂದ ಒಳಗೆ ಓಡುವಳು.)*

ಬಾಳ್ಯಾ : ಏನೊ ಸಂಗಣ್ಣಾ, ಸಾವಕಾರನ ಗೇಣಿಕಾರಂತ ನಿನ್ನ ಬೆನ್ನ ಹತ್ತಿ ಬಂದರ ನಿನಗ ಬಹುಮಾನ; ನನಗ ಅವಮಾನ. ಎಳಿ ಎಳಿ ಶಾವಿಗಿ, ಚೆನ್ನೀ ಸಕ್ಕರಿ, ಸಣ್ಣಕ್ಕಿ ಅನ್ನ, ಕರಚೀಕಾಯಿ ಸೇರ ತುಪ್ಪ ನಿನಗ! ಪುಂಡಿಪಲ್ಲೆ, ರಾಗೀರೊಟ್ಟಿ, ತಂಗಳನ್ನ, ನೀರಸಾರಾ ನನ್ನ ಪಾಲಿಗಿ! ಏನ ಸುಖಾ ಏನ ಸುಖಾ!

ಸಂಗ್ಯಾ : ಗೆಳೆಯಾ ಬಾಳಣ್ಣಾ, ಅದನ್ಯಾಕಷ್ಟ ಮನಸಿಗಿ ಹಚಿಕೊಳ್ತಿ? ನನ್ನ ಎಡೀ ನೀ ಉಣ್ಣು. ನಿಂದ ನನಗ ಕೊಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಿಂದ ಉಂಡರ ನಾ ಶ್ರೀಮಂತ ಆಗೋದಿಲ್ಲ. ಏಷ್ಟಂದರೂ ಬಡವ ಬಡವs. ಶ್ರೀಮಂತ ಶ್ರೀಮಂತs. ನಿನ್ನ ಎಡ್ಯಾಗಿಂದ ನೀ ಉಂಡ ಬಾ; ನಾ ಹೊರಗ ನಿಂತಿರತೇನ.

*(ಥಟ್ಟನೆ ಎದ್ದು ಹೋಗುವನು. ಸಂಗ್ಯಾ ನೊಂದುಕೊಳ್ಳುವನು. ಅಷ್ಟರಲ್ಲಿ ಗಂಗಿ ಓಡಿಬಂದು ಬಾಗಿಲು ಹಾಕಿಕೊಳ್ಳುವಳು.)*

ಸಂಗ್ಯಾ : ಗಂಗಾ, ನಾನಾದರೂ ಊಟಾ ಮಾಡಿದ್ದೇನ್ನೋಡು.

ಗಂಗಿ : ಸಂಗ್ಯಾ, ಲೇಪಡಿ ಜಮುಖಾನ ಹಾಸೇನಿ. ಅದರ ಮ್ಯಾಲ ಕೂತು ಎಲೆ ಅಡಿಕಿ, ಪಾನಸುಪಾರಿ, ವೀಳ್ಯಾ ತಗೊಳ್ಳುವಂಥವರಾಗರಿ.

ಸಂಗ್ಯಾ : ಗಂಗಾ, ನಾನಾದರೂ ವೀಳ್ಯಾ ತಗೊಂಡಿದ್ದೇನ್ನೋಡು.

ಗಂಗಿ : ಸಂಗ್ಯಾ, ಮತ್ತಾದರು ಹೇಳತೇನ ಕೇಳುವಂಥವರಾಗರಿ.

ಸಂಗ್ಯಾ : ಗಂಗಾ, ಅದೇನಿರುವುದು ತೀವ್ರವಾಗಿ ಹೇಳುವಂಥವಳಾಗು.

ಗಂಗಿ : **ರಂಗ ಮಂಚಕ ಹೋಗೋನ ನಡಿ**
**ಅಲ್ಲಿ ವಿಲಾಸ ಮಾಡೋಣ ಕೂಡಿ ||**

**ಹಾಲಿಗಿ ಹಾಕಿಧಾಂಗ ಹೆಪ್ಪಾ**
**ಕಣ್ಣಿಗಿ ಹತ್ತಿಧಾಂಗ ಜಂಪಾ**
**ಸೈನ ಮಾಡೋಣ ಇಬ್ಬರು ಕೂಡಿ**
**ರಂಗ ಮಂಚಕ ಹೋಗೋಣು ನಡಿ ||**

**ನಿನ್ನ ಮ್ಯಾಲ ಹೊಚ್ಚೇನು ಶಾಲ ಜೋಡಿ**
**ಪ್ರಿಯಾ ಅಂತೇನು ಘಾಸಿ ಮಾಡಬ್ಯಾಡಿ**
**ಹವಳ ಮುತ್ತ ಜೋಡೀಲೆ ಕೂಡಿಸಿಧಾಂಗ**
**ಪುರಮಾಸೆ ಬಗವಾನ ಕೂಡಿಸಿದಾನ ||**

*(ಕೈ ಕೈ ಹಿಡಿದು ನರ್ತಿಸುತ್ತ ರಂಗದ ಹಿಂಭಾಗಕ್ಕೆ ಹೋಗುವರು. ಮುಂಭಾಗದಲ್ಲಿ ಈರ್ಯಾ ಮತ್ತು ಬ್ಯಾಗರಿ ಬರುವರು.)*

ಈರ್ಯಾ : ಎಲೋ ಬ್ಯಾಗರಿ, ಕೆಟ್ಟ ಕನಸ ಬಿದ್ದ ಬಳ್ಳಾರಿ ವ್ಯಾಪಾರ ಸುಳ್ಳಮಾಡಿ ಊರಿಗಿ ಬಂದರ, ಯಾಕೋ ಮೂರೂ ಸಂಜೀಲೆ ಬಾಗಲ ಹಾಕೇತಿ. ಸುತ್ತ ಮುತ್ತ ಇದ್ದವರೆಲ್ಲಾ ನಮ್ಮನ್ನೋಡಿ ಚಪ್ಪಾಳಿ ಹೊಡದ ನಗತಾರು. ಏನ ಸಮಾಚಾರಂತ ಕೇಳಿಕೊಂಬಾ ಹೋಗು.

ಬ್ಯಾಗರಿ : ಈರಪ್ಪಣ್ಣಾ ನಾನಾದರು ಹೋಗಿ ಕೇಳಿಕೊಂಬರತೇನು. ನೀ ಇಲ್ಲೇ ಇರುವಂಥವನಾಗು.
*(ಮೇಳದವರೆಗೆ ಹೋಗಿ ಅವರನ್ನು ಕೇಳಿ ತಿಳಿದುಕೊಂಡು ಬರುವನು.)*
ಈರಪ್ಪಣ್ಣಾ ಯಾ ಮಾತಂತ ಏನ ಹೇಳ್ಲಿ? ನಿನ್ನ ಹೇಂತಿ ಗಂಗಿ, ಇದs ಈಗ ಮೇಲ್ಮನಿ ಸಂಗ್ಯಾನ ಕರಕೊಂಡು ಬಾಗಲಾ ಹಾಕಿಕೊಂಡಳಂತ.

ಈರ್ಯಾ : ಎಲೋ ಬ್ಯಾಗಾರಿ, ಈ ಮಾತ ಖರೆ ಇರುವದೇನು?

ಬ್ಯಾಗಾರಿ : ಎಲೋ ಈರಪ್ಪಣ್ಣಾ, ಮರಡಿ ಬಸವಣ್ಣನ ಆಣಿ ಆಗದಿ ಖರೆ ಇರುವುದು.

ಈರ್ಯಾ : ಖರೆ ಸುಳ್ಳ ಹೆಂಗೊ ತಿಳಿದs ತಿಳೀತೈತಿ, ಎಲೋ ಬ್ಯಾಗಾರಿ, ನೀ ಅಲ್ಲಿ ನಿಲ್ಲು, ನಾ ಇಲ್ಲಿ ನಿಂತಿರುತೇನು. ನಾ ಈಗಿಂದೀಗ ಬಾಗಲಾ ತಗಸ್ತೇನು. ಯಾವ ಮಗಾ ಹೊರಗ ಬಂದರೂ ಕಡದ ತುಂಡ ಮಾಡೋಣ. ಎಲೇ ಗಂಗೀ, ಆಗದಿ ತೀವ್ರದಿಂದ ಬಾಗಲಾ ತಗಿವಂಥವಳಾಗು

**ಎನ ಮಾಡತಿದ್ದಾಳಪ್ಪಾ ಗಂಗಿ ಒಳಗ**
**ಕದ ತಗಿವಾಳೊ ಎನಗ**
**ಬಂದ ನಿಂತ ಬಾಳ್ಹೊತ್ತಾತೊ ಬಾಗಿಲ ಹೊರಗ ||**

**ಮಾಳಿಗಿ ಹತ್ತಿ ನೋಡಲೇನೊ ಕಿಡಿಕ್ಯಾಗ**
**ಸಂಶೆ ಬಂದೀತೋ ಎನಗ**
**ಸಂಗ್ಯಾನ ಸುದ್ದಿ ಮಾತಾಡತಾರೊ ಊರವೊಳಗ ||**

**ಕಾಕೋತ ಕುಂದ್ರತೇನೊ ಬಾಗಿಲದಾಗ**
**ಸಂಗ್ಯಾ ಬರಲ್ಯೊ ಹೊರಗ**
**ಕಡದ ಚೂರ ಮಾಡುವೆ ಜನದಾಗ ||**

**ಮೂರೂ ಮಂದಿ ಅಣ್ಣ ತಮ್ಮರಿದ್ದೂ ಇಲ್ಲದ್ಹಾಂಗ**
**ಹೇಡಿತನ ಬಂತೋ ನಮಗ**
**ಸಂಗ್ಯಾನ ಕಡದ ಹೋಗುವೆ ಪಾಶೇಕ ||**

ಎಲೋ ಬ್ಯಾಗಾರಿ ಎಚ್ಚರದಿಂದ ಇರುವಂಥವನಾಗು.

ಬ್ಯಾಗಾರಿ : ಈರಪ್ಪಣ್ಣಾ, ಅಗದಿ ಎಚ್ಚರದಿಂದ ಇದ್ದೇನ್ನೋಡು.

ಗಂಗಿ : ಸಂಗ್ಯಾ, ಘಾತವಾಯಿತು, ಭಾರೀ ಘಾತವಾಯ್ತು, ಈರ್ಯಾ ಹೊರಗ ಬಂದ ನಮ್ಮಿಬ್ಬರ ಹೆಸರ ತಗೊಂಡ ಬೋರ್ಯಾಡಕ ಹತ್ತಿದ. ಇನ್ಹೆಂಗ ಮಾಡೋಣು?

**ಅಯ್ಯೋ ಸಂಗ್ಯಾ ಮಾಡಲ್ಹೆಂಗಾ**
**ಮಾಡಲ್ಹೆಂಗಾ**
**ಈರ್ಯಾ ಬಂದಾನ ಹೊರಗ ||**

**ಆರ ಮೂರ ಬಾಗಿಲದೊಳಗ**
**ಈರ್ಯಾ ಬೋರ್ಯಾಡತಾನ ||**

**ಹೆಸರಗೊಂಡ ಕರೀತಾನ**
**ಅಂತಾನ ಕಡೀತೇನ ||**

**ಈರ್ಯಾ ಆದಾನ ವೈರಿ**
**ಕೈಯಾಗ ಹಿಡದಾನ ಚೂರಿ ||**

ಸಂಗ್ಯಾ : ಗಂಗಾ, ಹೆಂಗಾದರು ಮಾಡಿ ನನ್ನ ಜೀವ ಉಳಿಸುವಂಥವಳಾಗು. ಹಿಂದೆ ಹಿತ್ತಲ ವಾಡಿ, ಮುಂದ ಈರ್ಯಾ ನಿಂತಾನು, ಹೆಂಗ ಪಾರಾಗಲಿ?

ಗಂಗಿ : ಸಂಗ್ಯಾ ಗಚ್ಚಿನ ಬಚ್ಚಲಾಗ ಇಲ್ಲಾ ಚಾಪೀ ಸುರಳ್ಯಾಗ ಮುಚ್ಚಿಡತೇನು, ಹೆದರಬ್ಯಾಡ್ರಿ.

ಸಂಗ್ಯಾ :ಗಂಗಾ, ಇಡೀ ಹೊಂಗಲದೋರಾಗ ಬೇಳೆದ ಮಗಾ ನಾನು. ಈಗ  ಚಾಪೀ ಸುರುಳಾಗ ಗಚ್ಚಿನ ಬಚ್ಚಲಾಗ ಹೆಂಗ ಡೊಗ್ಗಲಿ? ಎ ಗಂಗಾ, ಅವನಷ್ಟs ತಾಯೀ ಹಾಲ ಕುಡದ ಭೆಳದಿಲ್ಲಾ: ನಾ ಏನೂ ನಾಯೀ ಹಾಲ ಕುಡದಿಲ್ಲಾ. ಬಾಗಲಾ ತಗದಬಿಡು. ಆದದ್ದಾಗಲಿ ನಾ ಹೋಗುವಂಥನಾಗುತ್ತೇನೆ.

ಗಂಗಿ : ಸಂಗ್ಯಾ, ನಾ ಬಾಗಲಾ ತಗದ ಹುರುಪಲೆ ದೀಪಾ ಕಳೀತೇನು. ನೀವಾದರೂಕತ್ತಲಾಗ ಜಪ್ಪಿಸಿ ಕುಂತ ಪಾರಾಗುವಂಥವರಾಗರಿ.

ಈರ್ಯಾ : ಎಲೋ ಬ್ಯಾಗರಿ, ಬಾಗಲ ಸಪ್ಪಳಾಗಾಕಹತ್ತೇತಿ, ಹುಷಾರದಿಂದ ಇರುವಂಥವನಾಗು.

ಬ್ಯಾಗರಿ : ಈರಪ್ಪಣ್ಣಾ, ನಾ ಅಗದಿ ಹುಷಾರದಿಂದ ಇದ್ದೇನ್ನೋಡು.

*(ಇವರಿಬ್ಬರೂ ಹೊಂಚಿಕೊಂಡಿರುವಾಗ ಸಂಗ್ಯಾ ಗಂಗಿಯ ಹಿಂದಿನಿಂದ ಮುಂದೆ ಮುಂದೆ ಬರುವನು. ಗಂಗಿ ಬಾಗಿಲು ತೆಗೆದಂತೆ ಅಭಿನಯಿಸಿ ದೀಪ ಊದಿದಂತೆ ಮಾಡುವಳು, ತತ್ ಕ್ಷಣ ಸಂಗ್ಯಾ ಪ್ರೇಕ್ಷಕರಲ್ಲಿ ಜಿಗಿದು ಪಾರಾಗುವನು. ಹೋಗುವ ಅವಸರದಲ್ಲಿ ಅವನ ರುಂಬಾಲು ರಂಗದ ಮೇಲೇಯೇ ಬೀಳುವದು. ಈರ್ಯಾ, ಬ್ಯಾಗಾರಿ ಇಬ್ಬರೂ ಗುರಿ ತಪ್ಪಿ, ಪರಸ್ಪರ ತಬ್ಬಿಕೊಳ್ಳುವರು)*

ಬ್ಯಾಗಾರಿ : ಒಂದೀಟ್ರಾಗ ತಪ್ಪಿತೋ ಈರಪ್ಪಣ್ಣಾ!

ಇರ್ಯಾ : ಏ ಗಂಗಿ, ಈ ಜರತಾರಿ ರುಂಬಾಲ ಯಾವ ಚೋದೀ ಮಗಂದಾ? ಅವನ ತಾಯೀ ಹೊಟ್ಟಿ ತಣ್ಣಗಿತ್ತು, ತಪ್ಪಿಕೊಂಡಾ.

ಗಂಗಿ : ಗುಣವಂತಾ, ಯಾವುದಾದರು ದನಾ ಕಾಯೋ ಹುಡುಗ ಮರತ ಹೋಗಿರಬೇಕು.

ಈರ್ಯಾ : ಏ ಗಂಗೀ, ಕಾಣಾ ಕಾಣಾ ಓಡಿ ಹೋದಾ. ಮತ್ತ ನನ್ನ ಮುಂದ ಪಂಟ ಹೋಡೀಬ್ಯಾಡ. ಇಂಥಾ ರುಂಬಾಲ ಇಡೀ ಊರಾಗ ನದೊಂದೈತಿ, ಮೇಲ್ಮನಿ ಸಂಗ್ಯಾಂದ ಒಂದ ಐತಿ, ಸುಮ್ಮನ ಅದೇನ ನಿನ್ನ ವ್ಯವಹಾರ ಐತಿ, ಬೇಗನೇ ಬೊಗಳುವಂಥವಳಾಗು.

ಗಂಗಿ : ಗುಣವಂತಾ, ಯಾರಾದರೂ ಹುಲ್ಲ ಹೋರಿಯವರು ಮರತ ಹೋಗಿರಬೇಕು.

ಈರ್ಯಾ : ಕಾಣಾ ಕಾಣಾ ನನ್ನ ಮುಂದ ಸುಳ್ಳ ಹೇಳತೀಯೇನ? ಬೇಕಾದ್ದ ಬ್ಯಾಡಾದ್ದ ತಿನಿಸಿದ್ನಿ. ಪಂಜರದಾಗಿನ ಗಿಣೀ ಹಾಂಗ ಸಾಕಿದ್ನಿ. ನನಗs ಮೋಸಾ ಮಾಡೀದಿ ಅಂದಮ್ಯಾಲ ನನ್ನ ಮಾರಿ ನಿನಗ ಬ್ಯಾಡ, ನಿನ್ನ ಮಾರಿ ನನಗ ಬ್ಯಾಡ. ಎಲೋ ಬ್ಯಾಗಾರಿ, ಇರಪಕ್ಷಿ ಬಸವಂತನ್ನಾದರು ಕರಕೊಂಬರುವಂಥವನಾಗು. *(ಬ್ಯಾಗಾರಿ ಹೋಗುವನು.)*

ಗಂಗಿ : ಗುಣವಂತಾ, ಇಂಥಾ ಅಪವಾದ ನನ್ನಂಥಾ ಪತಿವ್ರತಾ ಹೆಂಗಸಿನ ಕೊರಳಾಗ ಕಟ್ಟಿ ಮೋಜಾ ನೋಡಬ್ಯಾಡ. ನೀ ಸ್ವಥಾ ಕಣ್ಣಿನಿಂದ ಅನ್ನೋ ಮಾತ ಅನ್ನುವಂಥವನಾಗು.

ಈರ್ಯಾ : ಬಿಡ ಬಿಡ ಬಡಿವಾರ; ಬಲ್ಲಿನಿ ನಿನ್ನ ಬಡ್ಡಿ ಬೇರಾ. ಮನ್ಯಾಗ ಹಿರೇಲ್ಲಂತ ಮಾಡೀದಿ ಕಾರಭಾರ, ಥೀ ರಂಡೆ ಕಳದೆ ನನ್ನ ಮಾನ!
*(ಇರಪಕ್ಷಿ ಬಸವಂತ ಬ್ಯಾಗರಿ ಬರುವರು.)*
ಏ ತಮ್ಮಗೋಳ್ರಾ,

**ಇರಪಕ್ಷಿ ಬಸವಂತಾ ಬರ್ರೊ ಬೇಗ**
**ಕುಂದ ಬಂದೀತೋ ನಮಗ**
**ಸಂಗ್ಯಾನ ಸಂಗ ಮಾಡ್ಯಾಳೊ ಗಂಗಿ ಒಳಗ ||**

**ಯಾಳೇ ಹೊತ್ತಿಗಿ ಆದೀರಂತ ಕುಸ್ತಿ ಮೇಸಿ**
**ಬೆಳಸೀನೋ ಪುರಮಾಸಿ**
**ಕುಸ್ತಿ ಬಿಟ್ಟ ಹೋಗುದ ನಿವಳ ದೇಶದೇಶಿ ||**

**ಮೂರೂ ಮಂದಿ ಅಣ್ಣ ತಮ್ಮರಿದ್ದೂ ಇಲ್ಲದಾಂಗ**
**ಸೀರೀ ಬಳಿ ಉಟ್ಹಾಂಗ**
**ಜನsದಾಗ ಮಾರೀ ಎತ್ತಿ ತಿರುಗೋದಿನ್ಹೆಂಗಾ ||**

ಇರಪಕ್ಷಿ; ಬಸವಂತ : ಎಲೋ ಎಣ್ಣಾ, ಈ ಮಾತ ಖರೆ ಇರುವದೇನು?

ಈರ್ಯಾ : ತಮ್ಮಗೊಳ್ರಾ ಕಣ್ಣಿಂದ ನೋಡಿ ಈ ಮಾತ ಹೇಳಿದ್ದೇನ್ನೋಡು.

ಇರಪಕ್ಷಿ : ಎಲೋ ಎಣ್ಣಾ, ಈ ಮಾತ ಖರೆ ಇದ್ದರ ಈಗಿಂದೀಗ ಗಂಗಾನ ಕಡದ ಚೂರ ಮಾಡೋಣ!

ಬಸವಂತ : ಎಲೋ ಎಣ್ಣಾ, ಹೆಂಗಸಿನ ಕಡಿಯೋದಾ, ಅಡಕಲ ಗಡಿಗಿ ಒಡೆಯೋದಾ ಸಮ ಐತಿ. ಈ ಗಂಗಾನ ವಸ್ತಾವಡಿವಿ ಕಳಚಿಕೊಂಡ ತವರ ಮನೀಗಿ ಕಳಸಿ, ಆ ಮೇಲ್ಮನಿ ಸಂಗ್ಯಾನ ಕಡದ ಬಿಡೋಣಂತೀನ್ನೋಡು.

ಗಂಗಿ :ಇರಪಕ್ಷಿ ಬುದ್ಯುಳ್ಳ ಮೈದುನಾ, ಬಸವಂತಾ ಬುದ್ಧಿವಂತಾ, ಸೇರಲಾರದ ಗಂಡ ಹಾದರದ ಅಪವಾದ ಹೊರಿಸಿದಾ. ಪಾಪ ಪುಣ್ಯ ಎರಡೂ ನೀವs ತೂಕ ಮಾಡರಿ.

ಈರ್ಯಾ : ಮತ್ತ ಬಣ್ಣದ ಮಾತಾಡತಾಳಲ್ಲೊ. ತಮ್ಮಗೊಳ್ರಾ ಕೈ ಬಿಡರ್ಯೋ, ಈ ರಂಡಿ ಚರ್ಮಾ ಸುಲೀತೇನು — ಕಾಲ ಮೇಲಮಾಡಿ ಗಿಡಕ್ಕ ತೂಗ ಹಾಕತೇನು.

ಇರಪಕ್ಷಿ : ಎಲೊ ಎಣ್ಣಾ, ಜರಾ ಹಿಂದ ಸರಿ. ಇಂಥಾ ಹೇಸಿ ಹೆಣ್ಣ ಕೊಲ್ಲೋದ ಕಲ್ಯಾಣಲ್ಲ. ತಮ್ಮಾ ಬಸವಂತಾ ಬಾ —
*(ಇಬ್ಬರೂ ನರ್ತಿಸುತ್ತ ಗಂಗಿಯ ಆಭರಣ ಕಸಿದಂತೆ ಅಭಿನಯಿಸುವರು.)*

ಗಂಗಿ : ಪಾಪ ಪುಣ್ಯ ಅಂಬೋದ ಇರಲೇಳೋ ನಿನ್ನ ಸುತ್ತಾ! ನನ್ನಂಥ ಹೆಣ್ಣ ಮರಗಿಸಿದ ಪಾಪ ಕಟ್ಟಿಕೊಳ್ಳೋ ಪದರಾಗ! ನಿನಗ ಯೋಳ್ಯೋಳ ಜನ್ಮಕ್ಕೆ  ನನ್ನಂಥಾ ಹೆಣ್ಣಿನ ಮಾರಿ ಕಾಣಧಾಂಗ ಆಗಲಿ! ನಿನ್ನ ವಂಶ ನಿರ್ವಂಶ ಆಗಲಿ!

ಈರ್ಯಾ : ಎಂಥಾ ಮಾತ ಬೊಗಳಿದೆಯೇ ರಂಡೇ, ಎಲೋ ಬ್ಯಾಗಾರಿ, ಈಕೀನ ಒದ್ದ ಹೊರಗ್ಹಾಕು. ನೀರಿದ್ದಲ್ಲಿ ಕುಡುದು ಹುಲ್ಲಿದ್ದಲ್ಲಿ ಮೇದುಕೊಂಡ ಅಡ್ಡಾಡಲಿ.
*(ಗಂಗಿ, ಬ್ಯಾಗಾರಿ ಹೋಗುವರು.)*
ಎಲೋ ತಮ್ಮಗೋಳ್ರಾ, ಈಗಿಂದೀಗ ನಾವೆಲ್ಲಾ ಹೋಗಿ ಆ ಮೇಲ್ಮನಿ ಸಂಗ್ಯಾನ ಕಡದ ಬರೋಣು; ನಡಿವಂಥವರಾಗರಿ.

ಇರಪಕ್ಷಿ; ಬಸವಂತ : ಎಲೋ ಎಣ್ಣಾ, ತೀವ್ರದಿಂದ ನಡಿವಂಥವನಾಗು

ಮೂವರೂ : **ಹುಡುಕಲಿನೆಲ್ಲಿ, ನೋಡಲಿನೆಲ್ಲಿ**
**ಮೇಲ್ಮನಿ ಸಂಗ್ಯಾನ**
**ಹಾದರದವನ ಚೋದೀಮಗನ**
**ಹೊಲ್ಯಾಗ ಹುಟ್ಟಿದವನ||**

*(ಕಾಡು ನೃತ್ಯ ಕುಣಿಯುತ್ತ ಮೂವರೂ ರಂಗದ ತುಂಬ ಹುಡುಕುವರು.)*

ಈರ್ಯಾ : ಎಲೋ ತಮ್ಮಗೊಳ್ರಾ, ಹಿಂಗ ಹುಡುಕಿದರ ಆ ಸಂಗ್ಯಾ ಸಿಗಾಣಿಲ್ಲಾ, ಅವನ ಗೆಳೆಯಾ ಬಾಳ್ಯಾನ ಮನೀಗಿ ಹೋಗಿ ಸಂಗ್ಯಾನ ಹಿಡಿದ ಕೊಡಬೇಕಂತ ಹೇಳ್ರಿ. ರೊಕ್ಕ ರೂಪಾಯಿ ಆಸೇ ತೋರಸರಿ. ಬೇಕಾದರ ಕಗದ ಪತ್ರ ಬರದ ಕೊಡರಿ, ಲಗು ಹೊರಡುವಂಥವರಾಗಿರಿ.

ಇರಪಕ್ಷಿ; ಬಸವಂತ : ಎಲೋ ಎಣ್ಣಾ, ನಾವಾದರು ಈಗಿಂದೀಗ ಹೋಗತೇವ ನೋಡು.

## ಘಾತ ಮಾಡಿದೆಯೊ ಬಾಳ್ಯಾ

*(ಸಂಗ್ಯಾ , ಬಾಳ್ಯಾ ಕೈಕೈ ಹಿಡಿದು ಕಾಡಿನಲ್ಲಿ ಬರುತ್ತಿದ್ದಾರೆ. ಸಂಗ್ಯಾ ಉತ್ಸಾಹವಿಲ್ಲದೆ ಯಾಂತ್ರಿಕವಾಗಿ ಹೆಜ್ಜೆ ಹಾಕುತ್ತಿದ್ದಾನೆ.)*

ಸಂಗ್ಯಾ : ಗೆಳೆಯಾ ಬಾಳಣ್ಣಾ, ಇಂದ ಊರಿಗಿ ಬರೋದಕ್ಕ ನನಗ್ಯಾಕೋ ಮನಸಿಗಿ ಹಳಹಳಿ ಆಧಾಂಗ ಅನಸತೈತಿ. ನೀನs ಹೋಗಂತಿದ್ದೇನ್ನೋಡು.

ಬಾಳ್ಯಾ : ಗೆಳೆಯಾ  ಸಂಗಣ್ಣಾ, ಹುಲಿಯಂಥಾ ಎದೀ ನಿಂದಾ, ಹಳಹಳಿ ಆಗಾಕ ಕಾರಣೇನೋ ?

ಸಂಗ್ಯಾ : ಗೆಳೆಯಾ ಬಾಳಣ್ಣಾ, ನಿನ್ನ ಮುಂದ ಹೇಳದs ಇನ್ನ ಯಾರ ಮುಂದ ಹೇಳಲಿ? ಹುಡುಗಾ, ನಿನ್ನಿ ರಾತ್ರಿ ಭಾಳ ಕೆಟ್ಟ ಕನಸ ಬಿದ್ದಿತ್ತು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಕನಸಿನೊಳಗ ಏನೇನ ಕಂಡಿ?

ಸಂಗ್ಯಾ : ಮನೀಮುಂದ ಹಂದರಾ ಹಾಕಿತ್ತು. ನಿಬ್ಬಣ ಬಂದಿತ್ತು. ಲಗ್ನ ಆಗತಿತ್ತೋ ಗೇಳೆಯಾ, ನನ್ನ ಕೈಯಾಗ ಕಂಕಣ ಇತ್ತು. ಗಂಗಾ ಆರತಿ ಬೆಳೆಗೋವಾಗ ಆರತ್ಯಾಗಿನ ಕಳಸ ಮುರದ ಬಿತ್ತು. ನಾ ಇಂದ ಬರಾಕ ಒಲ್ಲೆಂತಿದ್ದೇನ ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ , ಇಂಥಾ ಕನಸ ಎಂದಾದರೂ ಖರೆ ಬಂದಾವೇನೊ? ಹೆಂಗಸರ್ಹಾಂಗ ತಿರುಗಿ ಯಾಕ ಹೋಗೋದಾ ? ಸುಮ್ಮನ ಹೋಗೋಣ, ನಡಿವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣ ಇದೂ ಅಲ್ಲದ ನನಗ್ಯಾಕೋ ಈ ಹೊತ್ತ ಭಾಳ ಅಪಶಕುನ ಆಗ್ಯಾವು.

ಬಾಳ್ಯಾ : ಗೆಳೆಯಾ ಸಂಗಣ್ಣಾ , ಏನೇನ ಅಪಶಕುನ ಕಂಡಿ?

ಸಂಗ್ಯಾ : ಗೆಳೆಯಾ ಬಾಳಣ್ಣಾ, ಗಂಗಾನ ಮನಿಂದ ಹೊರಬರೋವಾಗ ತಲೀಗಿ ಬಾಗಲ ತೋಳ ಬಡದ ತಲೀ ಮ್ಯಾಲಿನ ರುಂಬಾಲ ಕೆಳಗ ಬಿತ್ತು. ಎದರ ದಾರ್ಯಾಗ ಸಣಿಕೆ, ಗುದ್ದಿ ಎದುರಾದವು. ಬೆಕ್ಕಾದರು ಅಡ್ಡ ಬಂತು, ಬರಾಣಿಲ್ಲೋ ಗೆಳೆಯಾ ಬಾಳಣ್ಣಾ ನಾ ಇಂದಾ, ನೀ ಹೋಗೋ ಮುಂದಾ.

ಬಾಳ್ಯಾ : ಛೇ ಛೇ ಸಂಗಣ್ಣಾ, ಏನ ಮಾತಂತ ಅಡತಿ? ಆಡತ ಆಡತ ಅರ್ಧಾ ಹಾದೀ ಬಂದಿವಿ. ಇನ್ನೇನ ಆ ಕ್ಯಾದಿಗಿ ಮೆಳಿ ದಾಟಿದರ ಬೈಲಹೊಂಗಲ ಬಂತು. ನಡಿನಡಿಯೊ ನಿನ ಹುಚ್ಚಾ.

ಸಂಗ್ಯಾ : ಗೆಳೆಯಾ ಬಾಳಣ್ಣಾ , ಯಾಕೋ ಅಡ್ಡ ಹಾದೀ ಹಿಡಿದೀವಂತ ಅನಸತೈತಿ — ಕ್ಯಾದಿಗಿ ಮೆಳೀ ಕಡೆ ಯಾಕ ಕರಕೊಂಬಂದಿ?

ಬಾಳ್ಯಾ : ಗೆಳೆಯಾ ಸಂಗಣ್ಣಾ, ಹೊತ್ತ ಮುಣುಗಿ ಕತ್ತಲಾಗಾಕ ಹತ್ತೇತಿ. ಲಗು ಅಡ್ಡ ಹಾದೀ ಹಿಡಿದ ಹೋಗೋಣ ನಡಿವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣಾ, ಯಾಕೋ ನನ್ನ ಎದ್ಯಾಗ ಕಸವಿಸಿ ಆದ್ಹಾಂಗ ಆಗತೈತಿ, ಕಣ್ಣಿಗೆ ಚಕ್ರ ಬರತೈತಿ, ನಡದೇನಂದರ ಕಾಲಾಗ ಶಕ್ತಿಯಿಲ್ಲಧಾಂಗ ಆಗೇತಿ. ಇಲ್ಲೆಲ್ಲಾದರು ಒಂದ ಹನಿ ನೀರಿದ್ದರ ತಂದ ಕೊಡವಂಥನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ , ಇನ್ನೇನ ನಾಕ ಹೆಜ್ಜ್ಯಾಗ ಹಳ್ಳ ಬರತೈತಿ, ಅಲ್ಲೀತನಕ ಹೋಗೋಣು, ನಡಿವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣಾ, ನನಗಂತೂ ಅಷ್ಟ ದೂರ ನಡಿಯೋದಕ್ಕ ಆಗಾಣಿಲ್ಲ. ನೀನs ಒಂದೆರಡ ಹನಿ ತಂದ ಬಾಯಿಗೆ ಹಾಕುವಂಥವನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಯಾಕೋ ನೀ ಇಂದ ಭಾಳ ಬೇಚಿತ್ತ ಮಾಡಾಕ ಹತ್ತೀದಿ. ನಿನ್ನ ಕೊರಳಾಗ ವಸ್ತಾವಡಿವಿ ಭಾಳ ಅದಾವು. ಮೊದಲs ಇಲ್ಲಿ ತುಡುಗರು ಭಾಳ, ಅವನ್ನ ಕಳಚಿ ನನ್ನ ಕೈಯಾಗ ಕೊಡುವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣಾ , ನಾನs ಬಿಚ್ಚಿಕೊಡುವಷ್ಟು ಶಕ್ತಿ ನನ್ನಲ್ಲಿಲ್ಲಾ. ನೀನs ಬಿಚ್ಚಿಕೊಳ್ಳುವಂಥವನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ , ನಾನಾದರು ವಸ್ತಾವಡಿವಿ ಬಿಚ್ಚಿಕೊಂಡಿದೇನು. ಈಗಿಂದೀಗ ನೀರ ತರತೇನು, ನೀ ಇಲ್ಲೇ ಇರುವಂಥವನಾಗು.

*(ಸಿಳ್ಳು ಹೊಡೆದು ಓಡುವನು, ತತ್ ಕ್ಷಣವೆ ಈಯ್ಯಾ್ರ, ಇರಪಕ್ಷಿ, ಬಸವಂತ ಮೂವರೂ ಕುಡಗೋಲು, ಕೊಡ್ಲಿ, ಪಂಜುಗಳೊಂದಿಗೆ ಪ್ರೇಕ್ಷಕರ ಮಧ್ಯೆ ಕಾಣಿಸಿ ಕೊಂಡು ಕಿರುಚುವರು. ಸಂಗ್ಯಾ ಗಾಬರಿಯಾಗುವನು.)*

ಸಂಗ್ಯಾ : ಘಾತ ಮಾಡಿದೆಯಾ ಬಾಳ್ಯಾ ! ಎಲೋ ಈರಪ್ಪಣ್ಣಾ.

**ಕೇಳೊ ಈರಣ್ಣಾ ಮಾತಾ**

**ಹೋದರೆಲ್ಲಾರು ಸತ್ತಾ**

**ಕೈಯಾರೆ ಮುಗಿವೆನು, ಕಾಲಾರೆ ಬೇಳುವೆನು**

**ಕೊಲ್ಲಬ್ಯಾಡಿರೊ ವ್ಯರ್ಥಾ ||**

**ಒಂದ ಹೆಣ್ಣಿಗೆ ನಾನು**

**ಎರಡ ಹೆಣ್ಣ ಮಾಡುವೆನು**

**ಹೊಂಗಲದೂರಾಗ**

**ಬೇಡಿದ್ದ ಕೊಡುವೆನು ||**

**ನಿಮ್ಮ ಮೂವರೊಳಗೆ**

**ನಾ ಒಬ್ಬ ಸಣ್ಣ ತಮ್ಮ**

**ನಿಮ್ಮ ಹೆಣ್ಣಿನ ಸಮ**

**ಹೆಣ್ಣ ದಾಸಿಯ ಸಮ**

**ಕೈಮುಗದ ಬದಿಕೇನೋ ||**

ಎಲೋ ಈರಪ್ಪಣ್ಣಾ, ಇರಪಕ್ಷಿ , ಬಸವಂತಾ , ನನ್ನ ಮಾತಾದರು ಕೇಳುವಂಥವರಾಗಿರಿ.

ಈಯ್ಯಾ್ರ : ಏನ ಕೇಳತೀರಿ, ಹಿಡೀರಲೆ —

*(ಮೂವರೂ ರಂಗದ ಕಡೆಗೆ ಕಿರುಚುತ್ತ ಓಡಿ ಬರುವರು. ರಂಗಕ್ಕೆ ಬಂದ ತತ್ ಕ್ಷಣ ಇಬ್ಬರು ಮೇಳದವರು ಓಡಿಹೋಗಿ, ತೆಂಗಿನ ಕಾಯಿ ಒಡೆದು ಪಂಜುಗಳನ್ನು ಇಸಿದುಕೊಂಡು ರಂಗದ ಮೇಲೆ ಒಂದೊಂದೊ ಮೂಲೆಯಲಿ ನಿಲ್ಲುವರು. ಈಯ್ಯಾ್ರ ಇರಪಕ್ಷಿ ಬಸವಂತ ಆಯುಧಧಾರಿಗಳಾಗಿ ಓಡುತ್ತ ಸಂಗ್ಯಾನ ಬೆನ್ನು ಹತ್ತುವರು.)*

ಮೂವರು : **ಗಡಾಣ ಬರ್ಯ್ಯೊ ಮೇಲ್ಮನಿ ಸಂಗ್ಯಾನ**

**ಚೆಂಡ ಕೊಯ್ಯೋಣ**

**ಸೊಕ್ಕಿಗಿ ಬಂದ ಕೈಯಾಗ ಸಿಕ್ಕಾನ**

**ಸೀಳಿ ಒಗೆಯೋಣ ||**

**ಕಲ್ಲ ಹೇರಿ ಕಾಲ ಮುರೀರ್ಯೊ**

**ಕಡಿಯೊ ನೆತ್ತಿ ಮ್ಯಾಲ**

**ಕೋಲೀ ಹೊಲದಾಗ ದರದರ ಎಳಿಯೊ**

**ಮೀಟೊ ಅವನ ಕಾಲಾ||**

*(ಮೇಲೆ ವರ್ಣಿಸಿದಂತೆ ಸಂಗ್ಯಾನನ್ನು ಹಿಂಸಿಸಿ ಕೊಲ್ಲುವರು. ಜೀವ ಹೋಯಿತೆಂದಾಗ ಮೇಳದವನೊಬ್ಬ ಆರ್ತನಾಗಿ ಕಿರುಚುವನು, ಒಂದೆರಡು ಕ್ಷಣ ರಂಗ ಸ್ತಬ್ಧವಾಗಿರುವುದು. ಈರ್ಯ್ಯಾ ಉತ್ಸಾಹರಹಿತನಾಗುವನು.)*

ಈರ್ಯ್ಯಾ : ಎಲೋ ತಮ್ಮಗೊಳ್ರಾ. ಕಡಿಯೋತನಕ ಒಂದು ಧೈರ್ಯ ಇತ್ತು. ಕಡದ ಮ್ಯಾಲ್ಯಾಕೊ ನನ್ನ ಕಣ್ಣಿಗೆ ಚಕ್ರ ಬರತೈತಿ, ಮುಂದಿನ ದಾರಿ ಕಾಣವೊಲ್ಲದು. ಕೆಟ್ಟ ಇಂಗರೇಜಿ ಸರಕಾರ, ಯಾಕಾದರೂ ಕೊಂದಿವೋ ಅಂತ ಆನಸತೈತಿ.

ಇರಪಕ್ಷಿ : ಎಲೋ ಎಣ್ಣಾ , ಒಳಕಲ್ಲದಾಗ ತಲೀ ಹಾಕಿದ ಮ್ಯಾಲ ಒಣಿಕೀ ಪೆಟ್ಟಿಗ್ಯಾಕ ಅಂಜೋದಾ? ನಾವಾದರು ಕಚೇರಿಗಿ ಹೋಗಿ ಜಜ್ ಸಾಹೇಬರ ಮುಂದ ಕಬೂಲೀ ಜವಾಬ ಹೇಳೋಣ, ನಡಿವಂಥನಾಗು.

ಬಸವಂತ : ಎಲೋ, ಎಣ್ಣಾ, ನೀ ಎಂದೂ ರಕ್ತ ನೋಡದವ ಅಲ್ಲ. ಅದಕ್ಕ ಹಿಂಗಾಗತೈತಿ. ನಾವಿಬ್ಬರೂ ರಟ್ಯಾಗ ಕೈಹಾಕಿ ಹಿಡಕೊಂಡ ಬರತೇವು, ಕಚೇರಿಗೆ ಹೋಗಿ ಹಾಜರಾಗೋಣ, ನಡಿವಂಥವನಾಗು.

ಈರ್ಯ್ಯಾ : ಎಲೋ ತಮ್ಮಗೊಳ್ರಾ, ಹಂಗಾದರ ನಡಿವಂಥರಾಗಿರಿ.

*(ಮೆಲ್ಲಗೆ ಮುಂದೆ ಬರುವರು. ದಾರಿಯ ಹುಲ್ಲು ಹರಿದು ಕೈಯಲ್ಲಿ ಹಿಡಿದು ಪ್ರೇಕ್ಷಕರ ಹತ್ತಿರ ಬಂದು ಅವರೇ ನ್ಯಾಯಾಧೀಶ ಎಂಬಂತೆ ಮಾತಾಡುವರು.)*

ಬಸವಂತ : ಎಲೋ ಎಣ್ಣಾ , ಇಲ್ಲೇ ಕಚೇರಿ ಕೂಡೇತಿ, ಜಜ್ ಸಾಹಾಬರು ಕುಂತಾರು, ಹೇಳೋನ ತಗೊವಂಥವನಾಗು.

ಮೂವರು : **ರಾವಸಾಹೇಬರ ಕೇಳಿರಿ ಎನ್ನ ಮಾತಾ**
**ಎನ್ನ ಮಾತಾ**
**ಸಂಗ್ಯಾನ ಕೊಂದೇವರಿ ಬೇಕಂತಾ ||**
**ಊರವೊಳಗ ಕಾಳಗ ಆದಾನಾವಾ**
**ಆದಾನಾವಾ**
**ಆದರ ದಶಿಂದ ಸಂಗ್ಯಾನ ಕೊಂದೇವ ನಾವಾ ||**

*(ಪ್ರೇಕ್ಷಕರಿಗೆ ಕೈಮುಗಿಯುತ್ತಿರುವಂತೆ)*

ತೆರೆ

# ಒಲ್ಲಿನೆನಬ್ಯಾಡ ಮಗಳ

*(ಪರಮ್ಮ ಸಂಗ್ಯಾನ ರುಂಬಾಲು ಕೈಯಲ್ಲಿ ಹಿಡಿದುಕೊಂಡು ಬರುವಳು.)*

ಪರಮ್ಮ : ತಂಗೀ ಗಂಗಾ, ಮನಿಯೊಳಗಿದ್ದರೆ ಇತ್ತಕಡೆ ಬರುವಂಥವಳಾಗು.

ಗಂಗಿ : *(ಒಳಗಿನಿಂದಲೇ)*
ಹೊರಗ ಬಂದ ಕರೆಯುವಂಥವರು ಯಾರವರು?

ಪರಮ್ಮ : *(ರುಂಬಾಲು ಒಂದು ಕಡೆ ಬಚ್ಚಿಡುತ್ತ)*
ನನ ಮಗಳs ಹೊರಗ ಬಂದ ಗುರುತಾ ಹಿಡಿ ಅಂತಿದ್ದೇನ್ನೋಡು.

ಗಂಗಿ : *(ಹೊರಬಂದು)*
ಯಾರು ಪರಮ್ಮೇನು?

ಪರಮ್ಮ : ಹೌಂದ ನೋಡs, ನನ್ನ ಮಗಳ

ಗಂಗಿ : ಎಮ್ಮಾ , ಇಂದ ಇಷ್ಟ ತಡಮಾಡಿ ಯಾಕ ಬಂದಿ?

ಪರಮ್ಮ : ನನ ಮುದುಕ ಬಿಡೋದಿಲ್ಲ ಎವ್ವಾ

ಗಂಗಿ : ಪರಮ್ಮಾ, ನೀ ಅಂದರ ನಿನ್ನ ಮುದುಕಗ ಅಷ್ಟೊಂದ ಪ್ರೀತೇನ?

ಪರಮ್ಮ : ಅದೇನ ಪರಿತ್ಯೋ! ದೆವ್ವೋ! ಒಂದೂ ತಿಳೀಧಾಂಗ ಆಗೇತೇ ನನ ಮಗಳ! ಬಿಟ್ಟ ಒಂದ ಗಳಿಗಿ ಹೊರಗ ಹೋದರ ತಂಡಿ ಹತ್ತತೈತೇ ಮುದಕೀ ಅಂತ ಹಲುಬತೈತೇ ಎವ್ವಾ.

ಗಂಗಿ : ಅಷ್ಟು ಪ್ರೀತಿ ಮಾಡಿದರೆ ನಿನಗ್ಯಾಕ ಕಸವಿಸಿ ಆಗಬೇಕೆ ಪರಮ್ಮಾ?

ಪರಮ್ಮ : ಪಿರಿತಿ ಅದ್ದೂರಿ ಏನ ಹೇಳ್ಲೆ ನನ ಮಗಳs! ಊರಾಗ ಜಾತ್ರಿ ಸಡಗರ, ಅದೆಂತಾದೋ ನಾಗಿನ ಸಿನೇಮಾ ಬಂದೈತಿ. ನೋಡಿ ಬರತೇನೊ ಮುದುಕಾ ಅಂದರ ಮನ್ಯಾಗs ಸಿನೇಮಾ ತೊರಸ್ತೇನ ಬಾ ಅಂತೈತೇ ಎವ್ವಾ.

ಗಂಗಿ : ಇಷ್ಟು ಬುದ್ಧಿ ನನ್ನ ಗಂಡಗ ಹೋಳೀಲಿಲ್ಲ ನೋಡ.

ಪರಮ್ಮ : ನಿನ ಗಂಡನ ಸುದ್ದೀ ಹೇಳಬ್ಯಾಡ ತಾಯೀ; ಬೇಕಾದರ ಇನ್ನsಟ ನನ್ನ ಮುದುಕನ ಸುದ್ದೀನs ಹೇಳತೇನ ಕೇಳ.

ಗಂಗಿ : ಪರಮ್ಮಾ ಅದೇನ ಹೇಳುವಂಥವಳಾಗು.

ಪರಮ್ಮ : ನನ್ನ ಮುದುಕನ ಕಣ್ಣ ತಪ್ಪಿಸಿ ದೇವರ ಜಾತ್ರಿಗಿ ಹೋಗಿದ್ದೆ. ನನ ಮಗಳು ಪಿರಿತ್ಯಾಕಿ ಅಂತ್ಹೇಳಿ ದೇವರ ಪರಸಾದ ತಂದೇನು ತಗೊಂಡು ತಿನ್ನುವಂಥವಳಾಗು.

ಗಂಗಿ : ಎಮ್ಮಾ ನಿನ್ನ ಪರಸಾದ ತಗೊಂಡ ಇರಪಕ್ಷಿ ಬಸವಂತಗ ಕೊಡತೇನು.

ಪರಮ್ಮ : ನನ್ನ ಮಗಳ ನಿನ್ನ ಸಲುವಾಗಿ ತಂದೇನಿ, ನೀ ತಿನ್ನು. ಆ ಬಸವಣ್ಣ ಅಂದರ ಸಾಮಾನ್ಯ ದೇವರಲ್ಲs ಎವ್ವಾ! ಗಂಡಸನ್ನ ಒಯ್ದು ಹೆಂಗಸನ್ನ ಮಾಡತಾನ, ಹೆಂಗಸನ್ನ ಒಯ್ದು ಗಂಡಸನ್ನ ಮಾಡತಾನ! ಅಂಥಾ ದೇವರಿಗಿ ನಿಂದೆ ಮಾಡಿಧಾಂಗ ಆಗತೈತಿ ಸುಮ್ಮನ ತಿನ್ನು.

ಗಂಗಿ : ಪರಮ್ಮಾ ತಿಂದೇನ್ನೋಡ.

ಪರಮ್ಮ : ಹಂಗಾದರ ಸಿಕ್ಕಿ ನೋಡ.

ಗಂಗಿ : ಪರಮ್ಮಾ ಯಾಕ?

ಪರಮ್ಮ : ಇದ ನಾ ತಂದದ್ದು ಉಂಡಿ ಅಲ್ಲ. ದೇವರ ಪರಸಾದು ಅಲ್ಲ. ಮೇಲ್ಮನಿ ಸಂಗ್ಯಾ ಕೊಟ್ಟ ಕಳಿಸಿದ್ದ. ಅವನ ಉಂಡಿ ತಿಂದೀ ಅಂದಮ್ಯಾಲ ನನ್ನ ಮಗಳು ಅನ್ನದs ಋಣಾ, ಅವ ಹೇಳಿಧಾಂಗ ಕೇಳಬೇಕ ನೋಡ.

ಗಂಗಿ : ಪರಮ್ಮಾ ಈ ಮಾತ, ಇದs ಅಂದಿ, ಇನ್ನೊಮ್ಮಿ ಅಂದರ ಬಾಯಾಗಿನ ಹಲ್ಲ ಉದುರ್ಯಾವು. ಇರಪಕ್ಷಿ ಬಸವಂತಗ ಈ ಸುದ್ದಿ ಗೊತ್ತಾದರ ನಮ್ಮಿಬ್ಬರ ರುಂಡಾ ಚೆಂಡಾಡ್ಯಾರು. ಸುಮ್ಮನ ಬಂದ ಹಾದಿಂದ ಹಿಂದ ಹೋಗು.

ಪರಮ್ಮ : ಏನs ಗಂಗವ್ವಾ, ನಿಂದಾ, ಸಂಗ್ಯಾಂದಾ, ನನಗ ಗೊತ್ತಿಲ್ಲಂದಿ? ನೀರ ತರೋವಾಗ ಅವ ಹಳ್ಳ ಒಗದ ಬೆರಳ ತೋರಸ್ತಿದ್ದ. ನೀ ಸೆರಗವಾರಿ ಮಾಡಿ ಹುಬ್ಬ ಹಾರಸ್ತಿದ್ದಿ. ಇದೇನ ನನಗ ಗೊತ್ತಿಲ್ಲಂದಿ?.

ಗಂಗಿ : ಪರಮ್ಮಾ , ನಿನ್ನ ಮಾತ ಕೇಳಿದರ ಒಗತಾನ ಹರದ ಹೋದಾವು. ನಾ ಅತ್ತೀಮನಿ ಸೊಸಿ, ಇಂಥಾ ಅಪವಾದ ತಂದ ನನ್ನ ಕೊರಳಿಗಿ ಹಾಕಬ್ಯಾಡಾ. ಸುಮ್ಮನ ಹೋಗತೀಯೋ, ಇರಪಕ್ಷಿ ಬಸವಂತನ್ನ ಕರಿ ಅಂತೀಯೊ

ಪರಮ್ಮಾ : ಅಯ್ ನನ್ನ ಶಿವನ! ಇದ್ದ ಮಾತ ಹೇಳಿದರ ನಿನಗ ಸಿಟ್ಟ ಬಂತು? ಆಂ? ಇಕಾ, ಇಲ್ಲಿ ಸಂಗ್ಯಾನ ರುಂಬಾಲ ಹೆಂಗ ಬಂತ ಹಾಂಗಾದರ? ನನಗs ಪಂಟ ಹೊಡೀತಿ? ನೀ ಯಾಕ ಕರೀತಿ, ನಾನs ಕರೀತೇನ ತಡಿ, ಏ ಇರಪಕ್ಷಿ ಬಸವಂತಾ ಬರ್ಯೊ!

ಗಂಗಿ : ಏ ಪರಮ್ಮಾ ಹಂಗ್ಯಾಕೆ ಒದರತಿ? ರುಂಬಾಲ ನೀನs ತರಲಿಲ್ಲಾ? ಹಿಂಗಲ್ಲಾ ಬೋದಾ ಮಾಡಿ ನನ್ನ ಬಾಳ್ವೇಕ ಬಾಧಾ ಮಾಡೀ.

ಪರಮ್ಮಾ : ಸಂಗ್ಯಾನ ರುಂಬಾಲ ನಾ ಹೆಂಗ ತರಲಿ? ನಾ ಯಾಕ ತರಲಿ? ತಡಿ ಕರೀತೇನ — ಏ ಇರಪಕ್ಷಿ ಬಸವಂತಾ ಬರ್ಯೋ

ಗಂಗಿ : ಏ ಪರಮ್ಮಾ, ಈರ್ಯಾ ಇರಪಕ್ಷಿ ಬಸವಂತಾ ಊರಾಗs ಕೆಟ್ಟ ಮಂದಿ. ಸುದ್ದಿ ಗೊತ್ತಾದರ ಏನ ಮಾಡ್ಯಾರು? ಯಾಕs ಜೀವಬಲಿ ಕೊಡಬೇಕಂತಿ?

ಪರಮ್ಮಾ : ಯಾಕ ಈರ್ಯಾ ಈರ್ಯಾ ಅಂತ ಬಾಯಿ ಬಾಯಿ ಬಿಡತೀಯ ಗಂಗಾ? ಅವನ ಅಲ್ಲೇನ ಯಾಡ ದುಡ್ಡ ಲಾಭಕ್ಕ ಆಸೇ ಮಾಡಿ ಹರೇದ ಹೇಂತೀನ ಬಿಟ್ಟ ವ್ಯಾಪಾರಕ್ಕ ಹೋದ? ನನ್ನಂಥಾ ಮುದಕಿಗಿ ಇನ್ನs ಹರೇದ ಕುಬೆ ಮೈತುಂಬ ಹರದಾಡತೈತಿ. ನಿನ್ನಂಥಾಕಿಗಿ ಹೆಂಗಂತ ತಿಳಕೋಬ್ಯಾಡ? ಕೇಳs ಗಂಗವ್ವಾ. ನನ ಮಗಳ, ನನ್ನ ಬಿಟ್ಟ ಈ ಸುದ್ದಿ ಇನ್ನೊಬ್ಬರಿಗಿ ಹತ್ತೀತ ಹೆಂಗ? ರೂಪದಾಗ, ನನ ಮಗಳ ಸಂಗ್ಯಾ ನಿವಳ, ನಿನ್ನ ವಾರಿಗಿ. ನಾಕ ಮಾತ ಮಾತಾಡಿ, ಎಲೀ ಅಡಿಕಿ ತಿಂದ ಅವನ ಜೋಡಿ ಕೂಡಿಬಿಡು. ಊರಾಗಿನ ಮಂದಿ ನಿನ್ನ ಮನೀ ಕಡೇನ ಕಣ್ಣಿಟ್ಟಕೊಂಡ ಕುಂತಿರತಾರು? ಕಾಣಬಾರದs ಎಳೀ ದೀಪದ ಕುಡಿಹಂತಾ ಮೈ ಒಣಗಿಸಿಕೋತ ಕುಂತೀದಿ. ಮುಂದ ಬೇಕಂದಾಗ ಸಿಗಾಣಿಲ್ಲ.

**ಒಲ್ಲಿನೆನ ಬ್ಯಾಡ ಮಗಳs**
**ಗೆಣಿತನ ನಿವಳ**
**ಮೇಲ್ಮನಿ ಸಂಗ್ಯಾಗೋಳ ||**

**ರೂಪದಾಗ ಸಂಗ್ಯಾ ನಿವಳ**
**ಕೇಳ ಗಂಗಾ**
**ತೋಳದ ಮುತ್ತಿನ ಹವಳಾ ||**

**ಸೀರೀ ಕುಬಸ ಜರತಾರ**
**ಉಟಗೊಂಡ ಮೆರಿಯೆ**
**ಸರಗಿ ಬಂಗಾರ ಬಳಿಯೆ ||**

ಗಂಗಿ : ಪರಮ್ಮಾ , ಹೋಗಿ ಸಂಗ್ಯಾನ ಕರಕೊಂಡ ಬರುವಂಥವಳಾಗು

ಪರಮ್ಮಾ : ಈ ಮಾತು ಖರೆ ಹೌಂದಲ್ಲ?

ಗಂಗಿ : ಖರೆ ನೋಡ

ಪರಮ್ಮಾ : ಕೈಯಾಗ ವಚನಾ ಕೊಡ ಹಾಂಗಾದರ. ವಚನಾ ತಪ್ಪಿಸೋದಿಲ್ಲ ಹೌಂದಲ್ಲ?

ಗಂಗಿ : **ಕೊಟ್ಟ ವಚನ ತಪ್ಪವಳಲ್ಲ ನಾನಾ**
**ಕೇಳ ನೀನಾ |**
**ಮೂರೂ ಸಂಜೀಲೆ ಕರಕೊಂಡ ಬಾರs ನೀನಾ ||**

**ಲೇಪ ತಡಿಯಾ ಹಾಸಿ ಜಮಖಾನಾ**
**ಜಮಖಾನಾ |**
**ನಾಕು ದಿಕ್ಕೀಗೆ ಇಡುವೇನು ಸಮೇನಾ ||**

**ಊಂಚ ಗುಲಾಬಿ ಎಣ್ಣಿ ತರತೇನ**
**ತರತೇನ |**
**ಮೂರು ಸಂಜೀಲೆ ಕರತಾರ ಸಂಗ್ಯಾನ ||**

*(ಪರಮ್ಮ ಹೋಗುವಳು.)*

# ಮುತ್ತಿನ ವಾಲಿ ಕೊಟ್ಟಳು

*(ಸಂಗ್ಯಾ ಬಾಳ್ಯಾ ಒಂದೊಂದು ದಿಕ್ಕಿನಿಂದ ಬರುವರು.)*

ಸಂಗ್ಯಾ : ಗೆಳೆಯಾ ಬಾಳಾಣ್ಣಾ, ಹೋದ ಕೆಲಸಾ ಗಂಡ ಮಾಡಿಕೊಂಡ ಬಂದ್ಯೋ? ಹೆಣ್ಣ ಮಾಡಿಕೊಂಡ ಬಂದ್ಯೋ?

ಬಾಳ್ಯಾ : ಆಲಲಲಲ! ಗೆಳೆಯಾ ಸಂಗಣ್ಣಾ, ನಿನ್ನ ದಯದಿಂದ ನನಗಿಂದೇನ ಸುಖಾ! ಏನ ಸುಖಾ!

ಸಂಗ್ಯಾ : ಬಾಳಣ್ಣಾ, ಗಂಗಿ ಏನಂದಳೋ!

ಬಾಳ್ಯಾ : ಸಮಾಧಾನ ಮಾಡಿಕೊಂಡ ಉಸರ ತಗೊ ಗೆಳೆಯಾ ಸಂಗಣ್ಣಾ. ನೀ ಹೇಳಿದ ಠಿಕಾಣಕ್ಕ ಹೋದ್ನಿ, ಯಾರೂ ಇರಲಿಲ್ಲ. ಅಂಜಿಕೊಂಡ ಬಾಗಲಾ ಬಡದ್ನಿ. ಗಂಗಾ ಬಂದ ಕದ ತಗದ್ಲು "ಯಾರು? ಸಂಗಣ್ಣನ ಗೆಳೆಯಾ ಬಾಳಣ್ಣ ಏನು?" — ಅಂದ್ಲು.

ಸಂಗ್ಯಾ : ಗೆಳೆಯಾ ಬಾಳಣ್ಣಾ, ನನ್ನ ಹೆಸರ ಆಕಿಗಿ ಹೆಂಗ ತಿಳೀತೊ?

ಬಾಳ್ಯಾ : ಹರೇದ ಹುಡಿಗೇರಿಗಿ ನಿನ್ನ ಹೆಸರ ತಿಳಿಸಿಕೊಡಬೇಕೇನೊ?

ಸಂಗ್ಯಾ : ಗೆಳೆಯಾ ಬಾಳಣ್ಣಾ, ಮುಂದೇನಾತೊ?

ಬಾಳ್ಯಾ : "ಒಳಗೆ ಬಾ ಬಾಳಪ್ಪಣ್ಣಾ " — ಅಂದ್ಲು: ಕಾಲಿಗಿ ನೀರ ಕೊಟ್ಟಳು. ಕಂಬಲಿ ಹಾಸಿದ್ಲು. ಕೂತಕೊಂಡೆ. ಏನ ಪರಿಪರಿ ಮಾನಾಮಾಡಿದ್ಲೊ!

ಸಂಗ್ಯಾ : ಗೆಳೆಯಾ ಬಾಳಣ್ಣಾ. ಇಂಥಾ ಮಾನ ನೀ ಯಾರಿಂದ ಕಂಡಿ?

ಬಾಳ್ಯಾ : ನಿನ್ನಿಂದಃ ಕಂಡಿನಪ, ಮುಂದಿಂದ ಕೇಳು. ಸಂಗಣ್ಣನು ಗೆಣೆಕಾರ ಅಂದಮ್ಯಾಲ ಊಟಮಾಡಾಕಃಬೇಕಂದಳು. ಇಷ್ಟಿಷ್ಟುದ್ದ ಕಡಬ ಮಾಡಿದ್ದಳಪಾ! ಮ್ಯಾಲ ಒಂದ ಗಡಿಗಿ ತುಪ್ಪಾ ನೀಡಿದಳು! ಉಟಾತೋ ಗೆಳೆಯಾ ಪಸಂದ, ನಿನ್ನ ದಶಿಂದಾ!

ಸಂಗ್ಯಾ : ಗೆಳಯಾ ಬಾಳಣ್ಣಾ, ನನ್ನಿಂದ ನಿನಗ ಅಲ್ಲಿ ಊಟ ಸಿಕ್ಕಿತು. ನನಗೊಂದ ಕಡಬ ತರಬಾರದೇನೊ?

ಬಾಳ್ಯಾ : ಗೆಳೆಯಾ ಸಂಗಣ್ಣ, ಕೇಳದಃ ಇದ್ದೀನೇನೊ? ತಂಗಿ ಕೊಡವಾ ಅವಗೊಂದು ಕಡಬ; ಬಾಯಿ ತಕ್ಕೊಂಡಃ ನಿಂತಿರಾತಾನ — ಅಂದೆ.

ಸಂಗ್ಯಾ : ಗೆಳಯಾ ಬಾಳಣ್ಣಾ ಏನಂದಳೊ?

ಬಾಳ್ಯಾ : ಕಡಬೇನ ಮಾಡತಿ? ಗುರತಿಗಿ ಅವನ ಕಿವ್ಯಾಗಿ ಇಡಸಂತ ಹೇಳಿ ಒಂದ ಮುತ್ತಿನ ವಾಲೀ ಕೊಟ್ಟಾಳ ನೋಡೊ!

ಸಂಗ್ಯಾ : ಬಾಳಣ್ಣಾ, ವಾಲಿ ಎಲ್ಲೇತಿ, ಲಗು ಕೊಡೊ.

ಬಾಳ್ಯಾ : ಗೆಳೆಯಾ ಸಂಗಣ್ಣ, ಅಷ್ಟ ಯಾಕ ಅವಸರಾ ಮಾಡತಿ? ತಡಿಯೊ

ಸಂಗ್ಯಾ : ಏ ಬಾಳ್ಯಾ ಲಗು ತೆಗೀಯೊ

ಬಾಳ್ಯಾ : ಏ ಸಂಗ್ಯಾ ತಡೀಯೊ

ಸಂಗ್ಯಾ : ಏ ಬಾಳ್ಯಾ

ಬಾಳ್ಯಾ : ಏ ಸಂಗ್ಯಾ

ಸಂಗ್ಯಾ : ಏ ಬಾಳ್ಯಾ —

ಬಾಳ್ಯಾ : ಗೆಳೆಯಾ ಸಂಗಣ್ಣ, ನಾನಃ ಮುದ್ದಾಂ ನಿನ್ನ ಕಿವ್ಯಾಗ ಇಡಸಬೇಕಂತ ಹೇಳ್ಯಾಳ. ಸುಮ್ಮನೆ ಕುಂತಕಾ ಬಾ.
*(ಸಂಗ್ಯಾ ಕೂಡ್ರುವನು. ಬಾಳ್ಯಾ ಅವನ ಕಿವಿ ಹಿಡಿದು ಎತ್ತಿ ಕೂರಿಸಿ, ಎತ್ತಿ ಕೂರಿಸಿಬಿಡುವನು.)*

ಬಾಳ್ಯಾ : ಹೆಂಗೈತಿ ವಾಲಿ?

ಸಂಗ್ಯಾ : ಗೆಳಯಾ ಬಾಳಣ್ಣಾ, ಗಂಗಿ ನಿನಗ ಈ ಪರಿ ಮಾನ ಮಾಡಿದಳೇನೊ?

ಬಾಳ್ಯಾ : ಇಷ್ಟಃ ಯಾಕ ಹುಡುಗಾ, ಆಗಸರ ಬಟ್ಟೀ ಮಾಡಿ ಕಲ್ಲಮ್ಯಾಗ ಒಗದ್ಲು. ಉರವಲ ಮಾಡಿ ಒಲ್ಯಾಗ ಹಾಕಿ ತುರುಕಿದ್ಲು. ಹುಲ್ಲ ಮಾಡಿ ದನೀಗಿ ಹಾಕಿದಳು. ಅಂದಾಕರಾ ಕೆಟ್ಟ ಹೆಣ್ಣ, ಗೆಳೆಯಾ ಸಂಗಣ್ಣಾ, ಆಕೆ ಹಿಂಡಿ ಹಣ್ಣ ಮಾಡೋತನಕ ನನಗೆ ಕಿವೀ ಇದ್ದದ್ದಃ ಗೊತ್ತಿದ್ದಿಲ್ಲ ನೋಡು.

ಸಂಗ್ಯಾ : ಗೆಳಯಾ ಬಾಳಣ್ಣಾ, ನಿನ್ನ ಅಪಮಾನ ಮಾಡಿದರೂ ಒಂದಃ. ನನ್ನ ಅಪಮಾನ ಮಾಡಿದರೂ ಒಂದಃ. ಈ ಸೇಡ ನಾ ಏನ ಮರೆಯೋದಿಲ್ಲಾ. ನಾನಃ ಮುದ್ದಾಂ ಹೋಗಿ, ಹೊಂಚ ಹಾಕಿ ಭೇಟಿ ಆಗಿ ಕೇಳ್ತೇನು. ನೀ ಚಿಂತೀ ಬಿಟ್ಟ ಹಿಂದ ಸರಿವಂಥವನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣ, ನಾನದರೂ ಹಿಂದ ಸರೀತೇನ್ನೋಡು.
*(ಒಂದೊಂದು ದಿಕ್ಕಿಗೆ ಮರೆಯಾಗುವರು)*

## ನನ್ನ ಮಾರಿ ನೋಡಿ ಮತ್ಯಾಕಳತಿ?

*(ಸಂಗ್ಯಾ, ಗಂಗಿ ಬರುವರು, ಅವರ ಹಿಂದೆ ದೂರದಲ್ಲಿ ಬಾಳ್ಯಾ ನಿಂತಿರುವನು.)*

ಸಂಗ್ಯಾ : ಎಲೆ ಗಂಗ್ಯಾ, ನಾನಾದರು ಊರ ಬಿಟ್ಟ, ಮನೀ ಬಿಟ್ಟ ನಿನ್ನ ತವರ ಮನೀಗಿ ಬಂದ ಭಾಳ ದಿನಾ ಆತು. ಗೆಳೆಯಾ ಬಾಳಣ್ಣ ಒಬ್ಬನಃ ಇದ್ದ. ಬ್ಯಾಸರಾಗಿ ಇಂದ ಕರ್ಯಾಕ ಬಂದಾನು. ನಾನಾದರು ಹೋಗತೇನು ಕಳಸಿಕೊಡುವಂಥವಳಾಗು.

ಗಂಗಿ : ಸಂಗ್ಯಾ, ನಿನ್ನಿ ರಾತ್ರಿ ನನಗ ಭಾಳ ಕೆಟ್ಟ ಕನಸ ಬಿದ್ದಾವು. ಈರ್ಯಾ ಇರಪಕ್ಷಿ ಬಸವಂತಾ ಇನ್ನೂ ನಿನ್ನ ಹುಡುಕತಿರಬೇಕು. ಇನ್ನಷ್ಟು ದಿನಾ ಇದ್ದ ಆಮ್ಯಾಲ ಹೋಗುವಂಥವರಾಗರಿ.

ಸಂಗ್ಯಾ : ಗಂಗಾ, ಅಂತಾವರಿಗೆಲ್ಲಾ ಅಂಜಿ ಎಷ್ಟ ದಿನಾ ಅಂತ ಊರ ಬಿಟ್ಟ ಇರಾಕ ಆಗತೈತಿ? ಮನಿಮಾರ ಏನೇನಾಗ್ಯಾವಂತ ಗೊತ್ತಿಲ್ಲಾ, ನಮ್ಮ ಸುದ್ದಿ ಮರತಾರಂತ ಇಂದs ಬಾಳಣ್ಣ ಹೇಳ್ಯಾನಂದಮ್ಯಾಲ ಹೆದರಿಕೇನು? ಸುಮ್ಮನ ಕಳಸಿ ಕೊಡುವಂಥವಳಾಗು.

ಗಂಗಿ : ಸಂಗ್ಯಾ, ಆ ಘಾತ ಬಾಳ್ಯಾ ಬೇತ ಮಾಡಿದ್ದಾನು. ನಂಬಬ್ಯಾಡಂತ ಎಷ್ಟ ಸಲ ಹೇಳೇನಿ. ನನ್ನ ಮಾತ ಕೇಳವೊಲ್ಲಿ; ಹೆಂಗ ಹೇಳಲಿ?

ಸಂಗ್ಯಾ : **ನನ್ನ ಮಾರಿ ನೋಡಿ ಮತ್ಯಾಕಳತಿ**
**ಹೇಳಾಕ ನನ್ನ ಗೆಳತಿ?**
**ಹಿಂಗ ಮನಸಿನೊಳಗೆ ಯಾಕಳತಿ**
**ಚಿಂತೀಲೆ ಏನ ಭ್ರಾಂತಿ?**
**ಯಾರ ಬೈದರೇನ ಗಂಗಾ ನಿನ್ನ**
**ದುಕ್ಕ ಪಡತಾರೇನ?**
**ಹಿಂಗ ಭಾಸಿಕೊಟ್ಟ ಮ್ಯಾಲ ಗಂಗಾ**
**ಮೋಸ ಮಾಡುವರೇನಾ?**
**ಇಸವಾಸ ಗೆಳಿತಾನ**
**ಬಾಳ್ಯಾಂದು ಭಾಳೈತಿ.**
**ಇದು ಚಿಕ್ಕಂದಿರತ ಕೂಡಿದ ಮೈತ್ರಿ**
**ಎರಡ ಮಾಡೇನಂತಿ.**

ಗಂಗಿ : ಸಿಟ್ಟ ಮಾಡಬ್ಯಾಡ್ರಿ ಸಂಗ್ಯಾ, ನನ್ನ ಕೊರಳ ಮುಟ್ಟಿ ಹೇಳತೇನು; ಇದರಾಗೇನೊ ಬೇತ ಐತಿ.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಇನ್ನೂ ಮುಗೀಲಿಲ್ಲೇನೊ?

ಸಂಗ್ಯಾ : ಎಲೇ ಗಂಗಾ...

ಗಂಗಿ : ಸಂಗ್ಯಾ ಯಾಕೋ ನನ್ನ ಬಲಗಣ್ಣ ಹಾರಲಿಕ್ಕೆ ಹತ್ತಿರುವುದು. ಇಂದ ಇದ್ದ ನಾಳಿ ಹೋಗುವಂಥವರಾಗರಿ.

ಸಂಗ್ಯಾ : ಗೆಳೆಯಾ ಬಾಳಣ್ಣಾ, ಎಂದೂ ಇಲ್ಲದ ಗಂಗಾ ಇಂದಿಷ್ಟ ಕೇಳಿಕೊಳ್ಳುತಾಳು. ಇಷ್ಟು ದಿನ ಊರ ಬಿಟ್ಟಿದ್ದ ಮ್ಯಾಲ ಇನ್ನೊಂದ ದಿನಕ್ಕ ಯಾಕ? ನನಗೂ ಬಲೆ ಬಲೆ ಅಪಶಕುನ ಆಗ್ಯಾವು. ನಾ ನಾಳಿ ಬರತೇನು, ನೀ ಹೋಗುವಂಥವನಾಗು.

ಬಾಳ್ಯಾ : ಗೇಳೆಯಾ ಸಂಗಣ್ಣಾ , ನೀನs ಇಲ್ಲದ ಬೈಲಹೊಂಗಲ ಒಂದ ಊರೇನೊ? ನೀ ಇತ್ತ ಬಂದಾಗಿನಿಂದ ಹುಡುಗಾ, ನಾ ಏನ ಹಾ ಅಂತ ನಕ್ಕಿಲ್ಲಾ, ಚಪ್ಪಾಳಿ ತಟ್ಟಿಲ್ಲಾ. ಊರಂತೂರ ಬಣ ಬಣ ಅಂತೈತಿ. ಆ ಹುಚ್ಚುಚ್ಚ ಅಪಶಕುನ ಏನ ಮಾಡ್ಯಾವು? ಅಪಶಕುನ ನಂಬಿ ಎಷ್ಟ ದಿನ ಅಡಗಿಕೊಂಡಿರಾಕ ಆಗತೈತಿ? ಅಷ್ಟು ಮೀರಿ ಈರ್ಯ್ಯಾ ಏರಿ ಬಂದರ ಅವನ ತಾಕತ್ತ ನಮಗ ಮೀರಿದ್ದೇನ? ಅವನಷ್ಟs ತಾಯೀ ಹಾಲ ಕುಡದಿಲ್ಲಾ. ನಾವೇನೂ ನಾಯೀ ಹಾಲ ಕುಡದ ಬೆಳೆದಿಲ್ಲಾ, ನಾವೊ ಒಂದು ಕೈ ತೋರಸೋಣಂತ, ಹೊರಟ ಬರುವಂಥವನಾಗು.

ಸಂಗ್ಯಾ : ಎಲೇ ಗಂಗಾ, ಬಾಳಾಣ್ಣ ಹೇಳಿದ ಮಾತ ಖರೇ ಇರುವುದು. ದಿನ ಬೆಳಗಾದರ ಮೋತಿಗಿ ಮೋತಿ ನೋಡವರಂದಮ್ಯಾಲ ಒಮ್ಮಿ ಖುಲಾಸ ಆಗೋದು ಚೆಲೋ ಐತಿ. ನಿನ್ನ ಗಂಡ ಈರ್ಯ್ಯಾನ ಸ್ವಭಾವ ನನಗ್ಗೊತ್ತಿಲ್ಲೇನ? ಒಂದ ಹೆಣ್ಣ ಖರ್ಚ ಮಾಡಿ ಮದಿವಿ ಮಾಡಿ ಕೊಡತೇನಂದರ ಸುಮ್ಮನಾಗತಾನು. ನಾನಾದರು ಆಗಾಗ ಬರತೇನು, ಕಳಿಸಿಕೊಡುವಂಥವಳಾಗು.

ಗಂಗಿ : ಆಗಲಿ ಸಂಗ್ಯಾ ಹೋಗುವಂಥವರಾಗರಿ.
*(ಗಂಗಿ ಒಂದು ದಿಕ್ಕಿಗೆ, ಸಂಗ್ಯಾ ಬಾಳ್ಯಾ ಇನ್ನೊಂದು ದಿಕ್ಕಿಗೆ ಹೋಗುವರು.)*

## ನನಗ ಏನ ಗಂಟ ಬಿದ್ಯೋ ಸಂಗ್ಯಾ

*(ಸಂಗ್ಯಾ ಹಾರಿ ಬಂದು ಅವಳ ದಾರಿ ಕಟ್ಟುವನು)*

ಸಂಗ್ಯಾ : **ಎನಕ ಬಗಿ ಬಯಲಕ ಬಿದ್ದೆ ಬಾಳ ದಿನಕಾ**
**ಹುಣಿವೀ ಚಂದ್ರ ಮೂಡಿಧಾಂಗ ಮರತೇಕಾ**
**ಕಣ್ಣೀಗಿ ದೀಪಾ ಹಚ್ಚೇಧಾಂಗ ನಿನ್ನ ಬೆಳಕಾ ||**

**ಜರದ ಶಲ್ಮೆ ಹಾಸಲೇನ ಪಾದ ಬುಡಕಾ**
**ಇದನೇನ ಸುದಬೇಕ**
**ಹುಡುಗಿ ನೀ ಮಾತನಾಡ ಜರಾ ಸೋಕ ||**

**ಬಾಳೆ ಬದುಕು ಜಿಂದಗಾನಿ ಯಾತಕ ಬೇಕ**
**ಅವನೇನ ಹುಗೀಬೇಕ**
**ಮಾನ ಅವಮಾನಾ ಎಲ್ಲಾ ಒಂದ ಸಮಕ ||**

ಗಂಗಿ : ಯಾಕೋ ಪೋರ ಬಂದ ನಿಂತಿ ನಮ್ಮಿದಿರಾ,
ಸುಮ್ಮನ ಹೋಗೋ ಸುಂದರಾ.
ಹೆಂತಾ ಮಾತಾಡ್ತಿ ಹಾರಪ್ಪಾ ನೀನಾ
ಹತ್ತವಲ್ಲದೊ ಕೂನಾ,
ನನ್ನ ಮುಂದ ಹೇಳಪ್ಪಾ ಯಾರೋ ನೀನಾ?

ಸಂಗ್ಯಾ : ಮೇಲ್ಮನಿ ಸಂಗಣ್ಣಂತ ಕೇಳಿಲ್ಲೇನಾ?
ಮಾಡಬ್ಯಾಡ ಹಗಣಾ
ಯಾಕಲಾ ಗಂಗಿ, ಏನಂತಿ?
ನಿನ್ನ ಮ್ಯಾಲ ನನ್ನ ಮನಸಾಗೇತಿ
ಬಾಯಿ ತೆರೆದ ಕೇಳಿದರ ಮುಗ ಮುರೀತಿ
ಈ ಜನಮದಾಗ ಐನ್ಯೆತಿ?
ಮೂರ ದಿನದ ಸಂತಿ.
ಮನೀ ಹೊಲಾ ಮರತ ಹತ್ತೇತಿ ನಿನ್ನ ಭ್ರಾಂತಿ

ಹರಲಿ ರಾತ್ರಿ ಬೀಳತಾವ ನಿನ ಕನಸಾ!
ಆಗ ಕೈವಾಸ.
ನೀ ಬಂದರ ಹರಕೊಂಡ ಬಿದ್ದಾಂಗ ಕೈಲಾಸ!
ದಾಟಿ ಹೋಗ ಹೆಂಗ ಹೋಗತಿ

ಗಂಗಿ : **ಬಿಡೊ ದಾರಿ! ಹುಡುಗಾಟ ತರವಲ್ಲ**
**ಹೊತ್ತ ಏರಿ| ಬಂದೀತೊ ನೆತ್ತೀ ಮ್ಯಾಲ ||**

**ನಿಮ್ಮ ಕೂನಾ| ಗುರುತ ನಮಗೇನಾ**
**ಕಾಡಬ್ಯಾಡೊ| ಬೀಳುವೆ ನಿಮ್ಮ ಕಾಲಾ ||**

**ದೊರಿ ಈರ್ಯಾ| ಅವ ನನ್ನ ಪ್ರಾಣಕಾಂತಾ**
**ಮೈದುನರ| ಇರಪಕ್ಷಿ ಬಸವಂತಾ ||**

**ತಲಿ ಕಾಲ| ಕಡೆದಾರೊ ನಿನ್ನ ಕ್ವಾಣಾ**
**ಸಣ್ಣಪೋರ| ಈಗಾರೆ ಅಗೊ ಜಾಣಾ ||**

**ಹಟಹಿಡದು| ನಿಂತೀಯೋ ನಮ್ಮ ಇದರಾ**
**ಕೇಳ್ಯಾರೇನೊ| ಗಂಡುಳ್ಳ ಬಾಲ್ಯಾರನಾ ||**

ಸಂಗ್ಯಾ : ಏ ಗಂಗಿ.
ಇರಪಕ್ಷಿ ಬಸವಂತಾ, ಕೂಸಿನಂಥಾ ಹುಡುಗರು
ಹಾವಗಾರ ಆಟ ತೋರಿಸಿದರ ಮೈ ಮರೆಯೋರು.
ಈರ್ಯಾ ನಿನ್ನ ಪ್ರಾಣಕಾಂತಾ,
ಗೊತ್ತೈತಿ ಅವನ ಕುವ್ವತ್ತಾ
ತೋರಿಸಿದರ ಮುರ ದುಡ್ಡಾ, ತಿಕ್ಕತಾನ ಮೂಗಾ!
ಕಣ್ಣಿಗಿ ಕಾಣತಿ ದೀಪಾ ಹಚ್ಚಿದಂಗಾ
ನೆವ ಹೇಳಿದರ ಕೇಳಾವಲ್ಲ, ಬಾರಃ ಗಂಗಾ!

ಗಂಗಿ : ಸಂಗ್ಯಾ
**ಅಲ್ಲೇನೊ ನಿನ್ನ ರೀತಿ.**
**ಪತಂಗಧಾಂಗ ಹಾರ್ಯಾಡ್ತಿ;**
**ಮಾಯಕ ಬಿದ್ದ ಸುಡತಿ.**
**ಬೆಲಿಗೇಡಿ, ತಿಳಕೊಳ್ಳೊ ರೀತಿ, ನಡತಿ.**
**ದಶಮುಖದ ರಾವಣ ಒಯ್ದಾನೊ ಸೀತಾನ,**
**ಆಯ್ತೇನೊ ಅವನ ಗತಿ??**
**ದ್ರೌಪದಿಯನೆಳದೊಯ್ದಾ, ದುಶ್ಯಾಸನೇನಾದ?**

**ಚಾಲಿವರದ ಹೇಳತೇನು; ಹುಚ್ಚಾ ತಿಳಿ.**

**ಪರಿ ಪರಿ ನಗಿ ಮಾಡಿ ಪಿರಿ ಪಿರಿ ಓಡಿ ಬಂದಿ.**

**ಸರಿ ದೂರ ಮೂಢಾ, ಮಾನ ಕಳಕೊಂಡಿ.**

ಸಂಗ್ಯಾ : ಗಂಗಾ,

ಪುರಾಣದ ಮಾತ ಹೇಳಿ ಓಡಿಹೋದೇನಂತಿ —

ನನಗೆ ಹತ್ತೇತಿ ನಿನ್ನ ಭ್ರಾಂತಿ.

ಕೂಳ ನೀರ ಬಿಟ್ಟ ಹತ್ತೇನ ಬೆನ್ನಾ

ಹೆಂಗ ಮರೀಲಿ, ದುಂಡಮೋತಿ, ತುಟಿ ತೊಂಡೀ ಹೆಣ್ಣಾ!

ಬಟ್ಟಮಲಿಯ ಹಾಲನಗಿ ಹೆಣ್ಣಾ.

ಕೈ ಮುಗೀತೇನ ಮಾಡ ಗೆಣಿತಾನ

ನಂಬಿ ಹಂಬಲಸ್ತೇನು.

ತೋರಿಸ ದಯಾ ಕರುಣಾ.

ಗಂಗಿ : **ನನಗ ಏನ ಗಂಟ ಬಿದ್ದ್ಯೋ ಸಂಗ್ಯಾ**

**ಹರಲಿ ಹೊರಲಾರ್ಯೋ ನಾನಾ ।**

**ಸಂಗ್ಯಾ ಬಾಳ ದಿನಾ । ನಡಿಯಾಕಿಲ್ಲೊ**

**ಕೆಟ್ಟ ಹೋದೀಯೋ ನೀನಾ ॥**

**ನಾ ಅತ್ತಿಮನಿ ಸೊಸಿ ಸಂಗ್ಯಾ**

**ಹರಸೀಯೊ ಒಗತಾನ ।**

**ಈ ಕಪ್ಪತಗುಡ್ಡ । ಕಣ್ಣಿಗಿ ಛಾಯಾ**

**ಹೊದೇನಂತೀಯೋ ನೀನಾ ॥**

**ನಾಳಿ ಸುಣ್ಣಾ ತಿಂದ ಮಂಗ್ಯಾನ್ಹಂಗ**

**ಹಲ್ಲ ಕಿಸದೀಯೋ ನೀನಾ ।**

**ಇದು ಹುಲ್ಲ ಜೀವಾ । ಅಲ್ಲೋ ಮತ್ತ**

**ಹುಟ್ಟಾಕ ಕೇಳೊ ಕ್ಷಾಣಾ ।**

**ಈರ್ಯಾ ಇದ್ದಾನೊ ಊರ ದೋರಿ**

**ಬಿಡುವುದು ಹುಲಿ ದಾರಿ ।**

**ಕಡದ ಒಗದಾನೊ । ಹಾಡಾಹಗಲಿ**

**ಕೊಡಬ್ಯಾಡೊ ಜೀವಬಲಿ ॥**

ಸಂಗ್ಯಾ, ನಾ ಹೇಳಿದ್ದಾದರು ತಿಳಿದ ಬಂತೇನು?

ಸಂಗ್ಯಾ : ಇಲ್ಲಂಬೊ ಮಾತ ಬಿಟ್ಟ ಬೇಕಾದ್ದ ಹೇಳ, ಕೇಳೇನು. ಏ ಹುಡೀಗಿ
ಕೋಲಮಿಂಚ ಹೊಡೆಧಾಂಗ ಏಕಾ ಏಕಿ.

ಎದೀ ಬಾಗಲಾ ದೂಡಿ ಒಳಗ ಹೊಕ್ಕಿ
ಹೂ ಅನ್ನs ಒಂದ ಸರತಿ
ತೆಕ್ಕೆ ಹಾಯೋಹಾಂಗ ಆಗೇತಿ.
ಕಡೀ ಮಾತ ಕೇಳು,
ಆದ್ದಾಗಲಿ, ನಿನ್ನ ಬಿಡೋದಿಲ್ಲ ನೋಡು.

ಗಂಗಿ : ನಿನ್ನಂಥಾ ಎಚ್ಚರಗೇಡಿ ಹುಚ್ಚುಚ್ಚಾಗಿ ಬೊಗಳಿದರ ನನ್ನಂಥಾ ಅಚ್ಚ ಪತಿವ್ರತೆಯರು ಮೆಚ್ಚಲಾರರು ನೋಡು.

ಸಂಗ್ಯಾ : ಬಿಡೋದಿಲ್ಲ ಗಂಗೀ ನಿನ್ನ.
ಬಾಳೇ ಮಾಡ ಉರಾಗಿನ್ನ
ನಿನ್ನ ಮ್ಯಾಲ ಹೋಗಲಿ ನನ್ನ ಪ್ರಾಣ. ನಿನ್ನ ಬಿಟ್ಟರ ನಾ ಬಾಳ್ಯಾನ ಹಳೀ ದೋತರಕ್ಕ ಸಮ ಅಂತಿ ತಿಳಿ.

ಗಂಗಿ : ನಿನಗೆ ಒಳಗಾದರ ನಾ ಪರಮ್ಮನ ಹರಕ ಸೀರಿಗಿ ಸಮ ಅಂತ ತಿಳಿ.
*(ಎಂದ ಹೇಳಿ ಓಡುವಳು. ಅವಳು ತಪ್ಪಿಸಿಗೊಂಡತೆ ಇವನು ಬೆನ್ನಟ್ಟಿದಂತೆ ನರ್ತಿಸುತ್ತ ಅಭಿನಯಿಸುವರು. ಕೊನೆಗೆ ಗಂಗಿ ತಪ್ಪಿಸಿ ಕೊಂಡು ಓಡುವಳು. ಸಂಗ್ಯಾ ಅವಳು ಹೋದುದನ್ನೇ ನೋಡುತ್ತ ನಿಲ್ಲುವನು. ಬಾಳ್ಯಾ ಪ್ರವೇಶಿಸುವನು.)*

ಸಂಗ್ಯಾ : ಗೆಳೆಯಾ ಬಾಳಣ್ಣ, ಗೊತ್ತಾತ ಬಾರೊ

ಬಾಳ್ಯಾ : ಏನ ಗೊತ್ತಾತು?

ಸಂಗ್ಯಾ : ಪರಮ್ಮನಿಂದ ಈ ಕೆಲಸ ಆಗತೈತಿ, ಬರುವಂಥವನಾಗು.
*(ಇಬ್ಬರೂ ಹೋಗುವರು)*

## ಗೆಳೆಯಾನ ತಂದ ಹೆಂಗ ಕೊಡಲಿ ?

*(ಬಾಳ್ಯಾನ ಬಳಿಗೆ ಇರಪಕ್ಷಿ ಬಸವಂತ ಬರುವರು)*

ಬಸವಂತ; ಇರಪಕ್ಷಿ : **ಮಾಡತೇವ್ರಿ ನಿಮಗ ಶರಣಾ**
**ಬಾಳಪ್ಪಣ್ಣಾ**
**ಮಾಡತೇವ್ರಿ, ನಿಮಗ ಶರಣಾ ||**

**ಸಣ್ಣ ಹುಡುಗರು ನಾವು**
**ಬಾಗಿ ಮಾಡೇವೊ ಶರಣಾ ||**

ಬಾಳ್ಯಾ : ಏನೋ ಇರಪಕ್ಷಿ ಬಸವಂತಾ, ನನಗ ಶರಣ ಮಾಡೋವಂಥಾದ ನಿಮಗೇನಾಗೇತಿ? ಅದನ್ನಾದರು ಹೇಳುವಂಥವರಾಗಿರಿ.

ಇರಪಕ್ಷಿ : ಏನೋ ಬಾಳಣ್ಣಾ , ಸುಳ್ಳುಸುಳ್ಳ ಹೆಚ್ಚ ಮಾತಾಡಿ ವ್ಯಾಳ್ಯಾ ಹಾಳ ಮಾಡೊದ್ಯಾಕ ? ಮೇಲ್ಮನಿ ಸಂಗ್ಯಾ ಮಾಡಿದ ಕಾರಭಾರ ನಿನಗೂ ಗೊತ್ತs ಐತಿ. ಆ ಸಂಗ್ಯಾನ ಹಿಡತಂದ ನಮ್ಮ ಕೈಯಾಗ ಕೊಡಬೇಕ ನೋಡು. ಹಾಂಗ ಕೊಟ್ಟಿದ್ದs ಆದರ ನಮ್ಮ ಪಾಲಿನ ಹೊಲಾ ಬರಕೊಡತೇವು. ಹದಿನಾರೆತ್ತ ಹಳಿವಿನ ಬಂಡೀ ಕೊಡತೇವು. ಮ್ಯಾಲ ನೂರಾರ ರೂಪಾಯಿನಾದರು ಮುಚ್ಚಿಕೊಡತೇವು. ಏನಂತಿ, ಅಗದಿ ತೀವ್ರದಿಂದ ಹೇಳುವಂಥವನಾಗು.

ಬಾಳ್ಯಾ : ಏನೋ ಇರಪಕ್ಷಿ ಇದೆಂಥಾ ಮಾತ? ಸಂಗ್ಯಾಂದು ನಂದು ಗೆಳೆತಾನಂದರ ಹಾಲ ಸಕ್ರಿ ಕೂಡಿಸಿಟ್ಹಾಂಗ. ದಿನಾ ನನ್ನ ಜಳಕಾಗೋದು ಅವನ ಮನ್ಯಾಗ. ಮಡೀ ದೋತರ ಮೈಮ್ಯಾಗಿಂದ ಅವಂದ. ದಿನಾ ನನ್ನ ಊಟ ಆಗೋದು ಸಂಗ್ಯಾನ ಮನ್ಯಾಗ ಹಾಲ ಹೈನದ ಓಳಗ. ಇಂಥಾ ಗೆಳೆಯಾನ ತಂದುಕೊಡಂದರ ಹೆಂಗ ತರಲಿ?

ಬಸವಂತ : ಎಲೋ ಎಣ್ಣಾ, ಈ ವಟ್ಟ ಬಾಳ್ಯಾ ಎಷ್ಟ ಹೇಳಿದರೂ ಕೇಳೋದಿಲ್ಲಾ, ಮೊದಲ ಇವನ್ನs ಮುಗಸೋಣ ತಗೊ ಅಂತಿದ್ದೇನ್ನೋಡು.

ಇರುಪಕ್ಷಿ : ತಗೊ ಹುಡುಗಾ
*(ಇಬ್ಬರೂ ಗಪ್ಪನೆ ಬಾಳ್ಯಾನನ್ನು ಹಿಡಿಯುವರು.)*

ಬಾಳ್ಯಾ : ಏನೋ ಇರಪಕ್ಷಿ ಬಸವಂತಾ, ನಾನಾದರು ನಿಮ್ಮ ಹೇಳಿಕಿ ಪ್ರಕಾರ ಸಂಗ್ಯಾನ ತಂದಕೊಡತೇನು. ನಾನೂ ನಿಮ್ಮ ಹೆಣ ಮಗಳ ಸಮ ಅಂತ ತಿಳಕೊಂಡ ಬಿಡುವಂಥವರಾಗಿರಿ. ಕೈಯಾಗ ನೂರಾರ ರೂಪಾಯಿ ಕೊಡರಿ. ಮನೀಹೊಲಾ ಎತ್ತಾ ಬಂಡಿ ಬರದಕೊಡರಿ.

ಬಸವಂತ : ತಗೋ ಕಾಗದ, ಹೇಳ ಎಂದ ತರತಿ? ಯಾವಾಗ ತರತಿ? ಎಲ್ಲಿ ತರತಿ?

ಬಾಳ್ಯಾ : ಏನೋ ಇರಪಕ್ಷಿ ಬಸವಂತಾ, ರಂಗಪಂಚಮಿ ದಿವಸ, ಹೊತ್ತ ಮುಳುಗೋ ವ್ಯಾಳ್ಯಾದಲ್ಲಿ, ಬಯಲವಾಡದ ಹಾದ್ಯಾಗ ಕರಕೊಂಬರತೇನು. ನೀವಾದರು ಕ್ಯಾದಿಗಿ ಮೆಳಿಯೊಳಗ ಅಡಗಿ ಕುಂತಿರ್ರಿ. ನಾ ಸಿಳ್ಳ ಹೊಡದೆ ಕೂಡಲೆ ನೀವಾದರು ಬರುವಂಥವರಾಗರಿ.

ಬಸವಂತ : ಅಪ್ಪಿ ತಪ್ಪಿ ಸಂಗ್ಯಾನ ತರದಿದ್ದರ...

ಇರಪಕ್ಷಿ : ಮಗನs ನಿನ್ನs ತೀರಿಸಿ ಬಿಡತೇವ, ಹುಷಾರ
*(ಇಬ್ಬರೂ ಹೋಗುವರು)*

## ಕುಂಟಲತನ ಮಾಡೋದು ಬಲು ಹೀನ

*(ಬಾಳ್ಯಾ ಬರುವನು)*

ಬಾಳ್ಯಾ : ತಂಗೀ ಗಂಗವ್ವಾ, ಮನೆಯಲ್ಲಿದ್ದರ ಇತ್ತ ಕಡೆ ಬರುವಂಥವಳಾಗು.

ಗಂಗಿ : *(ಒಳಗಿಂದಲೇ)*
ಏನಪಾ, ಅಗಸರವನಾಗಿದ್ದರ ಅರಿವಿ ನಡುಮನ್ಯಾಗ ಇಟ್ಟ ಹೋಗು.

ಬಾಳ್ಯಾ : ಅಗಸ — ನಿಮ್ಮಣ್ಣ ಆಗಿದ್ದಾನು. ಹೊರಗ ಬಂದ ಸ್ವಲ್ಪ ಗುರುತಾ ಹಿಡಿ ಅಂತಿದ್ದೇನ್ನೋಡು.

ಗಂಗಿ : ಏನಪಾ, ಕಟಗಿ ಹೊರಿ ತಂದಿದ್ದರ ನೀರೊಲಿ ಮುಂದ ಚೆಲ್ಲಿ ಹೋಗು.

ಬಾಳ್ಯಾ : ಏನವಾ ತಂಗಿ, ಅವ ನಿನ್ನ ತಮ್ಮ ಆಗಿದ್ದಾನು. ಹೊರಗೆ ಬಂದ ಗುರುತಾ ಹಿಡಿ ಅಂತಿದ್ದೇನ್ನೋಡು.

ಗಂಗಿ : ಏನಪಾ, ಹಲ್ಲು ಹೊರಿ ತಂದಿದ್ದರ ಅಲ್ಲೇ ಇಟ್ಟ ಹೋಗು.

ಬಾಳ್ಯಾ : ಏನವಾ ತಂಗಿ, ಹುಲ್ಲ ಹೊರಿ ಮಾರೋವಂಥಾವ ನಿಮ್ಮಪ್ಪ ಆಗಿದ್ದಾನು. ಹೊರಗ ಬಂದ ಸ್ವಲ್ಪ ಗುರುತಾ ಹಿಡಿ ಅಂತದ್ದೇನ್ನೋಡು.

ಗಂಗಿ : *(ಹೊರಬಂದು)*
ಯಾರು ಬಡವ ಬಾಳಣ್ಣೇನು?

ಬಾಳ್ಯಾ : ತಂಗಿ, ಹೌಂದು ನೋಡುವಾ.

ಗಂಗಿ : ಎಣ್ಣಾ, ಕಂಬಳಿ ಹಾಸಿದೇನು, ಮ್ಯಾಲ ಕೂರವಂಥವರಾಗರಿ.

ಬಾಳ್ಯಾ : ತಂಗೀ ನಾನಾದರು ಕುಂತಿದ್ದೇನ್ನೋಡು.

ಗಂಗಿ : ಎಣ್ಣಾ, ಬೆಲ್ಲ ತಿಂದ ನೀರ ಕುಡಿವಂಥವರಾಗರಿ.

ಬಾಳ್ಯಾ : ತಂಗೀ, ನಾನಾದರು ಬೆಲ್ಲ ತಿಂದ ನೀರ ಕುಡದ್ದೇನ್ನೋಡು.

ಗಂಗಿ : ಎಣ್ಣಾ, ಎಲಿ ಅಡಿಕೆ ಹಾಕುವಂಥವರಾಗರಿ.

ಬಾಳ್ಯಾ : ತಂಗೀ, ನಾನಾದರು ಎಲಿ ಅಡಿಕೆ ಹಾಕಿದ್ದೇನ್ನೋಡು.

ಗಂಗಿ : ಎಣ್ಣಾ, ಭಾಳ ದಿನಕ ಈ ತಂಗೀ ಮನಿಗಿ ಬಂದ ಕಾರಣೇನು? ಚೆಂದದಿಂದ ಹೇಳುವಂಥವರಾಗಿರಿ.

ಬಾಳ್ಯಾ : ತಂಗೀ ನಾ ಮೊನ್ನಿ, ಬೆಳಗಾವಿಗೆ ಹೋಗಿ ನನ್ನ ಹೇಂತಿಗೊಂದ ಬಂಗಾರ ಸರಿಗಿ ತಂದೇನು. ಆ ಸರಿಗಿ ಚೆಲೋ ಐತ್ಯೋ ಇಲ್ಲೊ — ನೋಡಿ ತಿಳಿಸುವಂಥವಳಾಗು.
*(ಕೊಡುವನು).*

ಗಂಗಿ : ಎಣ್ಣಾ ಈ ಸರಗಿ ನಂದಿದು.

ಬಾಳ್ಯಾ : ಏನಪಾ ತಂಗಿ, ಈ ಸರಗಿ ನಿಂದs ಅಂತ ಹೆಂಗ ಗುರುತಾ ಹಿಡಿದಿ?

ಗಂಗಿ : ಈ ಸರಗಿ ಮ್ಯಾಲ ನನ್ನ ಗಂಡನ ವಿಳಾಸ ಐತಿ.

ಬಾಳ್ಯಾ : ತಂಗೀ ಸರಿಗಿ ನಿಂದs ಇದ್ದರ ಇರಬೌದು. ಇದು ನನಗೇನೂ ಸಿಕ್ಕಿಲ್ಲ. ಮೇಲ್ಮನಿ ಸಂಗ್ಯಾಗ ಸಿಕ್ಕೇತಿ.... ಇರಪಕ್ಷಿ ಬಸವಂತಾ ಮನ್ಯಾಗಿಲ್ಲೇನು?

ಗಂಗಿ : ಎಣ್ಣಾ ಇದ್ದಕಿದ್ದಾಂಗ ಮಾತ ಬದಲಿಸಿ ಬೆವರತಿ, ಯಾಕ? ಅದೇನಿರುವುದು ಮುಚ್ಚಿಡದೇ ಹೇಳಿ ಬಿಡು.

ಬಾಳ್ಯಾ : ಏನಪಾ ತಂಗೀ ಗಂಗವ್ವಾ — ಹೇಳಲೇ?

ಗಂಗಿ : ಎಣ್ಣಾ, ಅದೇನ ಹೇಳು, ಗಂಟಲದಾಗ ಯಾಕ ಮಾತ ಮುಚ್ಚಿಡತಿ?

ಬಾಳ್ಯಾ : **ತಂಗೀ ಯಾರರೆ ಅದಾರೇನ ಒಳಿಯಾಕ**
**ನನಗ ಅಂಜಕಿ ಬರತೈತಿ ಕೇಳುದಕ ||**

**ನನ್ನ ಜೀವನದ ಗೆಳೆಯಾ ಸಂಗಣ್ಣಾ**
**ಮನ್ನಿ ಜಾತ್ರ್ಯಾಗ ಅವ ನಿನ್ನ ಕಂಡಾನ ||**

**ನಿನ ಮ್ಯಾಲ ಇಟ್ಟಿದಾನ ಮನಾ**
**ಹೋಗಿ ಕೇಳಂತ ಹೇಳ್ಯಾನ ನಿನ್ನಾ ||**

**ನೀ ಲೆಕ್ಕಲೆ ಆಗತಿ ನನತ್ತೀಗಿ**
**ಹೇಳ ಗುಣವಂತಿ ನಿನ್ನ ಸನಮತಿ ||**

ತಂಗೀ ನಾ ಹೇಳಿದ್ದಾದರೂ ತಿಳಿದ ಬಂತೇನು?

ಗಂಗಿ : *(ತತ್‌ಕ್ಷಣ ಗಂಗಿ ಅವನ ಕಿವಿ ಹಿಡಿದು ಮುಂದಿನ ಹಾಡು ಮುಗಿಯ್ಯುವ ತನಕ ಅವನ್ನು ಕೂರಿಸಿ, ಎಬ್ಬಿಸಿ ಅವಮಾನಿಸುವಳು.)*

**ಯಾವ ತಾಯಿ |**
**ಯಾವ ತಾಯಿ ಹಡದಾಳೊ ಬಾಳ್ಯಾ ನಿನ್ನಾ**
**ಮೀಸಿ ಹೊತ್ತ |**
**ಗಂಡಸಾಗಿ ಮಾಡತಿ ಕುಂಟಲತಾನ ||**

**ಕೇಳುವರೇನೊ |**
**ಕೇಳುವರೇನೊ ಗಂಡುಳ್ಳ ಬಾಲೇರನಾ**
**ಹರಿಸಿಬಿಟ್ಟೀ |**
**ಹರಿಸಿ ಬಿಟ್ಟೆ ಹೋಗೊ ಒಗತಾನ ||**

**ಹೆಂತಾ ಕೆಲಸ |**
**ಹೆಂತಾ ಕೆಲಸ ಕಲತ್ಯೋ ಬಾಳ್ಯಾ ನೀನಾ**
**ಕುಂಟಲತನ |**
**ಕುಂಟಲತನ ಮಾಡೋದು ಬಲು ಹೀನಾ ||**

ಬಾಳ್ಯಾ : ಏನಪಾ ತಂಗಿ , ಒಲ್ಲೆಂದರ ಮಾತ ಬಗೀಹರೀತು. ಅಷ್ಟ ಯಾಕ ನನ್ನ ಕಿಮೀ ಹಿಂಡತಿ ? ಬಿಟ್ಟ ಬಿಡುವಂಥವಳಾಗು.

*(ನೂಕುವಳು. ಹೋಗುವನು)*

## ಗಣ್ಣ ಪದ

ಮೇಳ : **ಕುಂತೀರೊ ಜನ ಕಲ್ ಕಲ್**
**ಮಾಡಬ್ಯಾಡ್ರಿ ಗುಲ್ಲಾ**
**ನಿಮ್ಮನ ನೋಡಿ | ನಾಚಿ ನಿಂತೇವೆಲ್ಲಾರಾ||**

**ಹೆಣ್ಣಗಂಡ ಸಭಾ ಕೂಡೇತಿ**
**ಸಭಾ ಒಳ್ಳೆ ಭರತಿ**
**ನಮ್ಮ ಮ್ಯಾಲಿ! ಇರಲೆಪ್ಪಾ ನಿಮ್ಮ ಪ್ರೀತಿ||**
**ಸಂಗ್ಯಾಬಾಳ್ಯಾ ಆದಂಥಾ ಮಜುಕೂರ**
**ಆದಂಥಾ ಮಜಕೂರ**
**ಕುಂತ ಕೇಳಿರಿ | ಬಲ್ಲಂಥಾ ಹಿರಿಯರ||**

**ಗಂಡಮೆಟ್ಟ ಗದಗೀನ ಶಾಪೂರ**
**ಬಸವಣ್ಣ ದೇವರ**
**ಅದಕ್ಹೋಗಿ ಮಾಡುವೆ ನಮಸ್ಕಾರ||**

ಮೇಟಿತಾಳ : ಕುಂತಿರೊ ಅಣ್ಣಗೊಳಾ, ನಿಂತಿರೊ ತಮ್ಮಗೋಳ್ರಾ, ಸಾಲೀ ಹುಡುಗರು  ಸಾಲೀ ಬಿಟ್ಟಕೂಡಲೆ ಹಾಂಗs ಬಂದ ಸ್ಟೇಜ್ ಹತ್ತೀದೇವು. ಸಂಗ್ಯಾ ಬಾಳ್ಯಾ ಆದಂಥಾ ಮಜಕೂರು. ಆಡಾವರು ಸಣ್ಣವರು. ಚಿಕ್ಕ ಹುಡುಗರ ಕವನದಲ್ಲಿ ಏನಾದರು ತಪ್ಪು ತಡೆಗಳಾದರೆ ಬುದ್ಧಿವಂತರು ಹೊಟ್ಯಾಗ ಹಾಕೋಬೇಕಂತ ಶರಣ ಮಾಡತೇನು. ಹೆದರ ಬ್ಯಾಡೋ ಹುಡುಗಾ ಅಂತ ಹರಸುವಂಥವರಾಗಿರಿ.

*(ತೆಂಗಿನಕಾಯಿ ಒಡೆದು ರಂಗದ ಎರಡೂ ಬದಿಗೆ ಎಸೆದು ನಮಸ್ಕರಿಸಿ ಹಿಂದೆ ಸರಿಯುವನು.)*

# ಕೊರಳಾಗಿನ ಸರಿಗಿ ಹೋದೀತ

*(ಸಂಗ್ಯಾ ಬಾಳ್ಯಾ ಬರುವುರು)*

ಸಂಗ್ಯಾ : ಗೆಳಯಾ ಬಾಳಣ್ಣ. ಈ ಊರಾಗ ಮರಡೀ ಬಸವಣ್ಣನ ಜಾತ್ರಿ ಅಗದಿ ಸಡಗರದಿಂದ ನಡದೈತಿ. ನಾವಾದರೂ ನೋಡಾಕ ಹೋಗೋಣು, ನಡಿವಂಥವನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನನ್ನ ಹಂತೇಲಂತೂ ಒಂದೂ ಕೆಂಪಾನ ಪೈಸಾ ಇಲ್ಲ. ಜಾತ್ರಿಗಿ ನಾ ಬರಾಣಿಲ್ಲ. ನೀನೂ ಹೋಗುವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣ, ರೊಕ್ಕ ರೂಪಾಯಿ ಚಿಂತೀ ನೀ ಯಾಕ ಮಾಡತಿ? ನಿನ್ನ ಸಲುವಾಗಿ ರೋಖ ರೂಪಾಯಿ ಮುನ್ನೂರ ತಗೊಂಡಿದೇನು. ನೀನಾದರು ಜಾತ್ರಿಗಿ ಬರುವಂಥವನಾಗು.

ಬಾಳ್ಯಾ : ಹಾಂಗಿದ್ದರೆ ಗೆಳೆಯಾ ಸಂಗಣ್ಣಾ ನಡಿವಂಥವನಾಗು.

ಸಂಗ್ಯಾ : **ನಡಿ ನಡಿಯೊ ಗೆಳೆಯಾ ಬಾಳಣ್ಣ**
**ಮರಡಿ ಬಸವಣ್ಣ**
**ಮಾಡ್ಯಾರೊ ಜಾತರಿ ಮಾಡ್ಯಾರೊ ಜಾತರಿ**
**ಹೂಡಿಕೊಂಡ ಬಂಡಿ ಕೊಲ್ಲಾರಿ**
**ಕೂಡೇತೊ ಜಾತರಿ ||**

**ಸಾಲ ಮೇಲ ಅಂಗಡಿ ಗೂಡಾರ**
**ತೂಗು ತೊಟ್ಟಿಲ**
**ಕುಂಡ್ರೋಣು ಬೇತವಾರಿ| ಕುಂಡ್ರೋಣು ಉಮೇದ್ವಾರಿ**
**ಒಡಿಸಿಕೊಂಡು ಬರೋಣು ಕಾಯಿಕಪ್ಪರ**
**ಹಚ್ಚಿ ದುಂದಕಾರ ||**

**ರೋಖ ರೂಪಾಯಿ ತಗೊಳ್ಳೊ ಮುನ್ನೂರಾ**
**ಅಂತಾರೊ ಸಾವ್ಕಾರ**
**ಜೋಡೀಲಿ ಗೆಳೆಯರ| ಜೋಡೀಲಿ ಗೆಳೆಯರ**
**ಕೇಳ ಗೆಳೆಯಾ ಜಾತ್ರಿ ಸಡಗರ**
**ಎಳಿಯತಾವ ತೇರ ||**

*(ಹಾಡುತ್ತ ಇಬ್ಬರೂ ಜಾತ್ರೆಯಲ್ಲಿ ಹೊಕ್ಕಂತೆ ಅಭಿನಯಿಸುತ್ತ ಕುಣಿಯುವರು. ಬಾಳ್ಯಾ ಜಾತ್ರೆ ನೋಡುತ್ತ ಒಂದು ದಿಕ್ಕಿನಲ್ಲಿ ಮರೆಯಾಗುವನು. ಅಷ್ಟರಲ್ಲಿ ಗಂಗಿ ಪೂಜಾಸಾಮಗ್ರಿಯೊಂದಿಗೆ ಬರುವಳು. ಗಂಗಿಯನ್ನು ನೋಡಿದೊಡನೆ ಸಂಗ್ಯಾ ಅವಳ ಸೌಂದರ್ಯಕ್ಕೆ ಚಕಿತನಾಗಿ ಅವಳ ಬೆನ್ನು ಹತ್ತುವನು. ಬರಬರುತ್ತ ಬಸವಣ್ಣನ ಮೂರ್ತಿ ಮೂಡುವುದು. ಗಂಗಿ ಬಾಗಿ*

*ನಮಸ್ಕರಿಸುತ್ತಿದ್ದಾಗ ಸಂಗ್ಯಾ ಅವಳ ಕತ್ತಿನಲ್ಲಿ ಸರಗಿ ಹರಿದುಕೊಂಡು ಪರಾರಿಯಾಗುವನು. ಅವಸರದಿಂದ ಪರಮ್ಮ ಬರುವಳು. ಗಂಗಿ ಕತ್ತು ಮುಟ್ಟಿ ನೋಡಿಕೊಳ್ಳುತ್ತ ಸರಗಿ ಹುಡಕುತ್ತಿರುವಳು)*

ಪರಮ್ಮ : ಏನ ಮಂದಿ ಏನ ಮಂದಿ ಏನ ಮಂದಿ ಕೂಡೇತಿ! ಯಾಕಃ ನನ ಮಗಳ ಹಾಂಗ ಹುಡಕತಿ? ಏನ ಕಳಕೊಂಡಿ?

ಗಂಗಿ : ಪರಮ್ಮಾ ಯಾ ಮಾತಂತ ಏನ ಹೇಳಲಿ?

ಪರಮ್ಮ : ಯಾಕ ಅಂಥಾದೇನ ಆತು?

ಗಂಗಿ : ಘಾತ ಆತು.
**ಏನೊ ಘಾತವನಾದೀತ**
**ಪರಮ್ಮ ಕೇಳ**
**ಕೊರಳಾಗಿನ ಸರಗಿ ಹೋದೀತ ||**

**ಅಂತಿಂಥಾ ಸರಿಗ್ಯಲ್ಲ**
**ಸೇರ ಬಂಗಾರ ಸರಗಿ ||**

**ಗಂಡ ಈರ್ಯಾನ ಮುಂದೆ**
**ಏನ ಹೇಳಲೆ ಪಂಟಾ ||**

ಪರಮ : ಏನ ಹುಚ್ಚೀ, ಮನ್ಯಾಗ ಬಿಟ್ಟ ಮರತು ಬಂದಿರಬೇಕ ಬಾ, ನೋಡೊಣ.

ಗಂಗಿ : ಹಾಂಗಾರ ನಡಿವಂತಳಾಗು
*(ಗಂಗಾ ಮುಂದೆ ಹೋಗುವಳು ಸಂಗ್ಯಾ ಥಟ್ಟನೆ ಹಾರಿಬಂದು ಪರಮ್ಮನನ್ನು ತರುಬಿ ಗಂಗಿಯ ಬಗ್ಗೆ ಮಾಹಿತಿ ಕೇಳುವಂತೆ, ಅವಳು ಹೇಳುವಂತೆ ಅಭಿನಯಿಸುವರು. ತಡವಾಯಿತೆಂದ ಪರಮ್ಮ ಓಡುವಳು. ಸಂಗ್ಯಾ ಮರೆಯಾಗುವನು.)*

## ಒಂದ ಹೆಣ್ಣ ಕಂಡೀನೊ ಬಾಳಣ್ಣ

*(ಸಂಗ್ಯಾ ಬಾಳ್ಯಾ ಒಂದೊಂದು ದಿಕ್ಕಿನಿಂದ ಬರುವರು)*

ಸಂಗ್ಯಾ : ಏನ ಜಾತ್ರಿ, ಏನ ಜಾತ್ರಿ ಸಡಗರ!

ಬಾಳ್ಯಾ : ಏನ ಮಂದಿ ಏನ ಮಂದಿ ಏನ ಮಂದೆಪಾ!

ಸಂಗ್ಯಾ : ಗೆಳೆಯಾ ಬಾಳಣ್ಣ, ಜಾತ್ರ್ಯಾಗ ಬಂದ ನೀನಾದರು ಏನೇನ ಕಂಡಿ? ಅದನಾದರು ಹೇಳಬೇಕಾದೀತ ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಮೊಂಡ ಬಾಲ, ಉದ್ದ ಕೊಂಬ ಹಂಡ ಹಣಚಿಕ್ಕ ಹೋರಿ ಓಡೋಡಿ ಬಂದರ ಜಾತ್ರಿ ಚೆದರಿ ಭಾಗಾನ ಭಾಗ ಆತಲೇ ಹುಡಗಾ.

ಸಂಗ್ಯಾ : ಗೆಳೆಯಾ ಬಾಳಣ್ಣ, ಮತ್ತಾದರೂ ಏನ ಕಂಡಿ?

ಬಾಳ್ಯಾ : ಗೆಳೆಯಾ ಸಂಗಣ್ಣಾ, ಜಾತ್ರೀ ಹಂತ್ಯಾಕೊಂದ ಒಡ್ಡ ಇತ್ತು. ಒಡ್ಡಿನ ಮ್ಯಾಲೊಂದ ಹೆಣ ಬಿದ್ದಿತ್ತು. ಹೆಣದ ಮ್ಯಾಲ ಹಿಂಡ ಹದ್ದ ಕುಂದ್ರತಿದ್ದವು. ಹಿಂಡ ಹದ್ದ ಏಳುತಿದ್ದವು!

ಸಂಗ್ಯಾ : ಗೆಳೆಯಾ ಬಾಳಣ್ಣ, ಬರೇ ಹೇಣಾ ದನಾ ಇವನ್ನs ಕಂಡ್ಯೋ? ಇನ್ನೇನಾದರೂ ಕಂಡ್ಯೊ?

ಬಾಳ್ಯಾ : ಗೆಳೆಯಾ ಸಂಗಣ್ಣಾ, ನನ್ನ ಕಣ್ಣಿಗಂತೂ ಇವs ಕಂಡವು. ನೀ ಇನ್ನೇನಾದರು ಮಜಕೂರ ಕಂಡಿದ್ದರ ಹೇಳಬೇಕಾದೀತ ನೋಡು.

ಸಂಗ್ಯಾ : ಗೆಳೆಯಾ ಬಾಳಣ್ಣ, ನಾ ಕಂಡದ್ದ ಹೇಳಲೇನೋ?

ಬಾಳ್ಯಾ : ಅಗದಿ ಚಂದವಾಗಿ ಹೇಳುವಂಥವನಾಗು.

ಸಂಗ್ಯಾ : **ಒಂದು ಹೆಣ್ಣ!**
**ಒಂದು ಹೆಣ್ಣ ಕಂಡೀನೊ ಬಾಳಣ್ಣ ||**

**ಊರವೊಳಗ|**
**ಊರವೊಳಗ ಇದ್ದಾಂಗ ರತಿದೇವೀನ ||**

**ನಾಗರಹಾವ|**
**ನಾಗರಹಾವಿನ್ಹಾಂಗ ನಡ ಸಣ್ಣ ||**

**ನಡಿನಾಗ|**
**ನಡಿನಾಗ ಇಟ್ಟಾಳೊ ವಡ್ಯಾಣ ||**

**ಹೂವಿನ ಕುಬಸ|**
**ಹೂವಿನ ಕುಬಸ ಇತ್ತಪ್ಪಾ ಎದೀಮ್ಯಾಲ ||**

**ದಾಳಂಬರಿ|**
**ದಾಳಂಬರಿ ಹಲ್ಲ ಕನ್ನಡಿಗಲ್ಲ ||**

ಗೆಳೆಯಾ ಬಾಳಣ್ಣಾ ಏನ ಹೇಳ್ಲಿ ಏನ ಹೇಳ್ಲಿ? ಹುಡುಗಾ ಸಾಲಂಗಡಿ ದಾಟಿ ಗುಡೀಗಿ ನಡದರ, ಹಾದ್ಯಾಗ ಕಡಾನ್ ಕೋಲ್ಮಿಂಚ ಹೊಡಧಾಂಗಾಗಿ ದಡಾನ ಕೆಳಗೆ ಬಿದ್ನಿ. ಎರಡೂ ಮಣಕೈಯಾ ಮಣಕಾಲ ಒಡದ ಹೋದವು. ಇದೇನಂತ ನೋಡಿದರ ಹುಡುಗಾ — ಲಿಂಬೀ ಹಣ್ಣಿನ್ಹಾಂಗ ಮೈಬಣ್ಣ, ನಡ ಸಣ್ಣ, ಕಾಡಿಗಿ ಕಣ್ಣ, ನಡಿನ್ಯಾಗ ವಡ್ಯಾಣ, ಕಾಲಾಗ ಪೈಜಾಣ — ಎದೀಮ್ಯಾಲ ಹೂವಿನ ಕುಬಸದ ಹೆಣ್ಣ ನೋಡಿ ಬಾಳ್ಯಾ ಮುಚ್ಚ್ಯಾವೋ ಕಣ್ಣಾ!

ಬಾಳ್ಯಾ : ಗೆಳೆಯಾ ಸಂಗಣ್ಣಾ, ಇನ್ನೂ ಹೆಂಗಿದ್ದಳು ಹೇಳುವಂಥವನಾಗು

ಸಂಗ್ಯಾ : ಹಣೀಮ್ಯಾಲ ಕುಂಕುಮ ರೇಖಾ, ಹಿಕ್ಕಿದ ಬೈತಲಿ, ಹೂ ಮುಡಕೊಂಡ ಬಾಳ್ಯಾ ನವಿಲಿನ್ಹಾಗ ಕುಣಕೋತ ಬಂದ್ಲು ....

ಬಾಳ್ಯಾ : ಗೆಳೆಯಾ ಸಂಗಣ್ಣಾ ಅಕೀ ಜೋಡಿ ಯಾರಿದ್ದರೋ?

ಸಂಗ್ಯಾ : ನಮ್ಮತ್ತಿ ಪರಮ್ಮ ಇದ್ಲು. ಈಕಿ ವಸ್ತ್ರಾವಡಿವಿ ಅಲಂಕಾರ ತಲೀತನಕ ಶಿಂಗಾರಾಗಿ ಸರಾಸರಾ ಕೈಬೀಸಿ ದರಕಾರಿಲ್ಲs ಹೋದಳು ನೋಡೋ.

ಬಾಳ್ಯಾ : ಗೆಳೆಯಾ ಸಂಗಣ್ಣಾ. ಇದಕ್ಕ ಬಂದ ನನಗೇನ ಮಾಡಂದಿ?

ಸಂಗ್ಯಾ : **ಸಾಹಸ ಮಾಡಿ ಒಡಸೋ ಬಾಳ್ಯಾ ಆಕಿ ಮನಸಾ**
**ಆಗತಾಳೊ ಕೈವಾಸ**
**ಹಂಗಾದರ ಕುಸಿ ಆತೋ ನನ್ನ ಮನಸಾ ||**

**ರಾತ್ರಿ ಹಗಲಿ ಬೀಳತಾವು ಆಕಿ ಕನಸಾ**
**ಅದರ ಕೈವಾಸ**
**ಕಡಕೊಂಡ ಬಿದ್ಧಾಂಗಪಾ ಕೈಲಾಸ ||**

**ಮರಮರ ಮರಗತೇನೊ ಮನದಾಗ**
**ಅರಿವಿಲ್ಲೊ ಶಂಕರಗ**
**ಮರಬಿಟ್ಟ ಮರತಾನಪ್ಪ ಭೂಮೀಮ್ಯಾಗ ||**

**ಮನೀಕಡೆ ಇಲ್ಲೊ ಬಾಳ್ಯಾ ನನ್ನ ಧ್ಯಾಸ**
**ಸಾಯತೇನೊ ಉಪವಾಸ**
**ಗಂಗಾನ ಮ್ಯಾಲಿ ಆಗೇತೊ ನನ್ನ ಮನಸಾ ||**

ಗೆಳಯಾ ಬಾಳಣ್ಣಾ ನಾ ಹೇಳಿದ್ದಾದರೂ ತಿಳಿದ ಬಂತೇನು?

ಬಾಳ್ಯಾ : ಗೆಳೆಯಾ ಸಂಗಣ್ಣಾ, ಅದೇನು ಚಂದವಾಗಿ ಹೇಳುವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣ, ಆಕಿ ಯಾರು ಏನು ಅಂತ ನಮ್ಮತ್ತಿ ಪರಮ್ಮನಿಂದ ಎಲ್ಲಾ ತಿಳಕೊಂದಿದೇನು, ಲಗಳೇರ ಗಂಗಾ ಅಂತ ಆಕಿ ಹೆಸರು. ದೇವರ ಪೂಜಿ ಮಾಡೋವಾಗ ಆಕೀ ಕೊರಳಾಗಿನ ಸರಿಗಿ ಬಿಚ್ಚಿ ಕೊಂಡಿದೇನು. ಈ ಸರಿಗಿ ಕೊಡೋ ನೆವ ಮಾಡಿಕೊಂಡು ಹೋಗು. ನನ್ನ ಹಂತ್ಯಾಕ ಬಂದ ಎಲಿ ಅಡಕಿ ತಿಂದ ನಾಕ ಮಾತ ಮಾತಾಡಿ ಹೋಗನ್ನು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನನಗೇನು ಕುಂಟಲತನ ಮಾಡಂದಿಯೇನೊ?

ಸಂಗ್ಯಾ : ಗೆಳಯಾ ಬಾಳಣ್ಣಾ, ಇದು ಕುಂಟಲತನ ಹೆಂಗಾಯ್ತು?

ಸಂಗ್ಯಾ : ಹೆಂಗಸ ಮಾಡಿದರs ಕುಂಟಲತನ. ಗಂಡಸ ಮಾಡಿದರ ಅದಕ್ಕಿಂತ ಹೆಚ್ಚಲ್ಲೇನೋ? ಮೊದಲs ಲಗಳೇರಂದರ ಕೆಟ್ಟಮಂದಿ ಖೊಟ್ಟಿ ಸೂಳೀಮಕ್ಕಳು, ಗೊತ್ತಾದರ ನನ್ನಂಥಾ ಬಡವನ್ನ ಕಡದ ಹಾಕಾಕಿಲ್ಲೇನೊ? ಹೊಂಗಲದೂರಾಗ ಬೆಳಕೊಂಡ ಹುಡುಗ ನಾನಾ, ಇಂಥಾ ಕೆಲಸ ಹೆಂಗ ಮಾಡಲಿ?

ಸಂಗ್ಯಾ : ಗೆಳಯಾ ಬಾಳಣ್ಣಾ ಜೀವಜೀವದ ಗೆಳಿತಾನಂದರ ಏನೊ?

ಬಾಳ್ಯಾ : ಗೆಳೆಯಾ ಸಂಗಣ್ಣಾ, ಏನೊ?

ಸಂಗ್ಯಾ : ನನ್ನ ಕೆಲಸಾ ನೀ ಮಾಡಬೇಕು; ನಿನ್ನ ಕೆಲಸ ನಾ ಮಾಡಬೇಕು.

ಬಾಳ್ಯಾ : ಹಂಗಾದರ ಈ ಕೆಲಸ ನಾ ಮಾಡಬೇಕಾಯ್ತುನ್ನು.

ಸಂಗ್ಯಾ : ಹೌಂದ ನೋಡು.

ಬಾಳ್ಯಾ : ಹಂಗಾದರ ಆಕಿ ಇರೂ ಠಿಕಾಣ ಹೇಳಿದರ ನಾನಾದರು ಹೋಗಿ ಬರತೇನ್ನೋಡು.

ಸಂಗ್ಯಾ : ಗೆಳಯಾ ಬಾಳಣ್ಣಾ, ಕೆಳಗಿನ ಪ್ಯಾಟೀ ಹಿಡಿದ ಹೋದರ, ಕೂಟಿನಾಗ ಗೊಂಬೀ ಗುಡಿ ಸಿಗತೈತಿ. ಗೊಂಬಿ ಗುಡೀ ಮುಂದ ಒಂದ ಟೆಂಗಿನ ಗಿಡ ಐತಿ. ಗಿಡದ ಮ್ಯಾಲೊಂದು ಪಾರಿವಾಳ ಕುಂತಿರುತೈತಿ. ಆ ತೆಂಗಿನ ಗಿಡದ ಮನೀನs ಆಕೀ ಮನಿ ನೋಡ ಹುಡುಗಾ.

ಬಾಳ್ಯಾ : ಪಾರಿವಾಳ ಹಾರಿ ಹೋಗಿದ್ದರ?

ಸಂಗ್ಯಾ : ನಾ ಕಣ್ಣಿಟ್ಟ ಪಾರಿವಾಳ ಅದೆಲ್ಲಿ ಹೋದೀತೊ?

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಾ ಅವರ ಮನೀಗಿ ಹೋಗೋದ ಯಾರಾದರು ನೋಡಿದರ ಹೆಂಗೊ?

ಸಂಗ್ಯಾ : ಅದೇನ ದೊಡ್ಡ ಮಾತೊ? ತಂಬಾಕ ಸೇದೋ ನೆವ ಮಾಡಿ, "ತಂಗೀ ಒಂದ ಬೆಂಕೀ ಕೆಂಡಾ ಕೊಡಬೇ" — ಅಂತ ಹೋಗು. ಬಾಗಲಾ ತಗೀತಾಳ. ಒಳಗ ಹೋಗು. ಗಪ್ಪನ ನೆಲಾ ಹಿಡದ ಕೂತಬಿಡು. "ತಂಗೀ, ನಿಮ್ಮುವೇನರೆ ವಡಿವಿ ಆಭರಣ ಹೋಗ್ಯಾವೇನಂತ ಸಣ್ಣಾಗಿ ಮಾತಿನೆಳಿ ತಗಿ. ಮಾತಿಗಿ ಮಾತ ಬಂದ ನನ್ನ ಹೆಸರ ಹೇಳು. ನನ್ನ ರೂಪಾ, ಶ್ರೀಮಂತಿಕೆ ಬೆಳಿಬೆಳಿಸಿ ಹೇಳು. ಕೂಳಾ ನೀರಾ ಬಿಟ್ಟ ನಿನಗಾಗಿ ಉಪವಾಸ ಸಾಯ್ತಾನಂತ ಹೇಳು. ಒಂದs ದಿನ ತಡಮಾಡಿದರ ಹೆಣಾ ಆಗತಾನಂತ ಹೇಳು. ಹೇಳಿ ಕರಕೊಂಬಾ ಹೋಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಾನಾದರು ಹೋಗತೇನು, ನೀ ಆದರೂ ಹಿಂದ ಸರಿವಂಥವನಾಗು.

*(ಸಂಗ್ಯಾ ಹಿಂದೆ ಸರಿಯುವನು. ಬಾಳ್ಯಾ ಒಂದು ದಿಕ್ಕಿನಲ್ಲಿ ಮರೆಯಾಗುವನು.)*

# ಬಳ್ಳಾರಿ ಪತ್ರ

*(ಪೋಸ್ಟಮನ್ ನರ್ತಿಸುತ್ತ ಬರುವನು)*

ಪೋಸ್ಟಮನ್ : **ಒತ್ತರ ಮಾಡಿ ಪತ್ತರ ತಂದೇನಾ ಈರಣ್ಣಗಾ**
**ಈರಣ್ಣನ ಮನಿ ದಾವಲ್ಲಿ ಹೇಳರಿ ನಮಗಾ ||**

**ಕೇಳಬೇಕಂದ್ರ ಓಣ್ಯಾಗ ಯಾರೂ ಇಲ್ಲಾ**
**ಲಗಳೇರ ಮನಿ ಗುರುತ ನಮಗಿಲ್ಲಾ ||**

**ಪೋಸ್ಟ್‌ಮನ ನೌಕರಿ ಪಗಾರ ನೂರಾ**
**ನಾಡಿಗಿ ದೊಡ್ಡದು ಇಂಗರೇಜಿ ಸರಕಾರ ||**

ಒಹೋ! ಪೋಸ್ಟಮನ್ ನೌಕರಿ ಅಂದರ ನಾಡಿಗೇ ಘನವಾದ್ದು. ಶಂಬೋರಿ ನೂರಾ, ಕೈತುಂಬ ಪಗಾರ, ಜಗತಿಗೇ ದೇವರ; ಇಂಗರೇಜಿ ಸರಕಾರ. ಓಹೋ! ಬಳ್ಳಾರಿ ದೇಶದಿಂದ ಪತ್ರ ಬಂದೇತಿ, ಲಗಳೇರ ಈರ್ಯಾನ ಮನಿ ದಾವಲ್ಲಿದ್ದೀತು?
*(ಈರ್ಯಾ ಬರುವನು)*
ಎನಪಾ ಸಜ್ಜನಾ, ಈರ್ಯಾ ಲಗಳೇರ ಮುಕ್ಕಾಂ ಬೈಲಹೊಂಗಲ ಅವನ ಮನಿ ಎಲ್ಲೇತಿ?

ಈರ್ಯಾ : ಏನ್ರೀ ಪೋಸ್ಟಮನ್ ಸಾಹೇಬರ, ಈರ್ಯಾ ಲಗಳೇರ ನಾನಃ ನೋಡ್ರೀ.

ಪೋಸ್ಟಮನ್ : ಏನಪಾ ಈರ್ಯಾ, ನಿನ್ನ ಪತ್ರ ಬಂದಿರುವುದು, ತಗೊಳ್ಳುವಂಥವನಾಗು.

ಈರ್ಯಾ : ಕೊಡುವಂಥವರಾಗಿರಿ.
*(ಪೋಸ್ಟಮನ್ ಕೊಟ್ಟು ನರ್ತಿಸುತ್ತ ಹೋಗುವನು.)*
ಒಹೋ ಬಳ್ಳಾರಿ ಸಾವ್ಕಾರಾ ಪತ್ರ ಬರೆದಿರುವನು —
*(ಓದುತ್ತ)*
ಹತ್ತು ವ್ಯಾಪಾರಿಗಳಲ್ಲಿ ಮುತ್ತಿನಂತೆ ಹೊಳೆಯುವ ರಾಜಮಾನ್ಯಾ ರಾಜೇಶ್ರೀ ಈರಾ, ಲಗಳೇರ, ಮುಕ್ಕಾಂ ಬೈಲಹೊಂಗಲ ಇವರಿಗೆ, ಅಪ್ಪಾ ಈರ್ಯಾ ಈ ಕಡೆ ಮುತ್ತಿನ ವ್ಯಾಪಾರ ಅಗ್ಗದೀ ಜೋರ್ ಐತಿ. ಜಲ್ದೀ ರೊಕ್ಕ ರೂಪಾಯಿ ತಗರೊಂಡ ಬರುವಂಥವನಾಗು, ಇಂತೀ ನಿಮ್ಮ ಇಂದು ರೋಃ ನಾಳೆ ಉದ್ರಿ ….. ಎಲೋ ತಮ್ಮಗೊಳ್ರಾ ಇರಪಕ್ಷಿ ಬಸವಂತಾ ಇತ್ತ ಕಡೆ ಬರುವಂಥವರಾಗಿರಿ.
*(ಇರಪಕ್ಷಿ ಬಸವಂತ ಎಡಬಲ ಬದಿಯಿಂದ ಹಾರಿ ಬರುವರು.)*
ಇರಪಕ್ಷಿ,

ಬಸವಂತ : **ಯಾಕೊ ಎಣ್ಣಾ ನೀ| ನಮ್ಮನ್ನು ಕರಸೀದಿ**
**ಕೇಳಿಸಿ ಬರಲಿಲ್ಲಾ ||**

**ಊರಾಗ ಮರಡಿಯ| ಜಾತರಿ ಸಡಗರ**
**ಹೋಗಿವೊ ನೋಡಲಾಕ ||**

**ರೊಟ್ಟಿ ಬುತ್ತಿ ಕಟ್ಟಿಕೊಂಡು| ಜಾತರಿ ಮಂದಿ ಬಂದೈತಿ**
**ಕುಸ್ತಿಯ ಹಿಡಿವುದಕ ||**

ಎಲೊ ಎಣ್ಣಾ, ನಮ್ಮನ್ನಾದರು ಏನಕಾರಣ ಕರಸಿದಿ, ಬೇಗನೇ ಹೇಳುವಂಥವನಾಗು.

ಈರ್ಯಾ : ಎಲೊ ತಮ್ಮಗೊಳ್ರಾ, ಮನೀ ಕೆಲಸಾ ಬಿಟ್ಟ ನೀವಿಬ್ಬರೂ ಎಲ್ಲಿಗಿ ಹೋಗಿದ್ದಿರಿ?

ಇರಪಕ್ಷಿ : ಎಲೊ ಎಣ್ಣಾ, ಊರಾಗ ದೇವರ ಜಾತ್ರಿ ಆಗದಿ ಸಡಗರದಿಂದ ನಡೆದೈತಿ. ನಾನಾದರೂ ಜಾತ್ರಿ ನೋಡಾಕ ಹೋಗಿನ್ನೋಡು.

ಬಸಂತ : ಎಲೋ ಎಣ್ಣಾ, ರೊಟ್ಟೀಬುತ್ತಿ ಕಟ್ಟಿಕೊಂಡ ಬಲೆಬಲೆ ಮಂದಿ ಕುಸ್ತಿ ಹಿಡ್ಯಾಕ ಬಂದಾರು. ನಾನಾದರು ಕುಸ್ತಿ ಹಿಡ್ಯಾಕ ಹೋಗೀನ್ನೋಡು.

ಈರ್ಯಾ : ಎಲೋ ಇರಪಕ್ಷಿ, ನೀ ಜಾತ್ರಿ ಮಾಡಿಕೋತ ಹೊಂಟಿ. ಎಲೋ ಬಸವಂತಾ ನೀ ಕುಸ್ತಿ ಹಿಡಕೋತ ಹೊಂಟಿ. ಎಂಟೂ ಎತ್ತಾ ಎಮ್ಮಿ ಕಟ್ಟಿದಲ್ಲೇ ನಿಂತಾವು, ಇವಕ್ಕಾದರೂ ನೀರ ಯಾರು ಕುಡಸವರು? ಕೊರದ ಕನಿಕಿ ಮೂಲ್ಯಾಗ ಹಾಂಗಃ ಬಿದ್ದೈತಿ, ದನಿಗಿ ಮೇವ ಯಾರು ಹಾಕವರು?

ಇರಪಕ್ಷಿ : ಎಲೊ ಎಣ್ಣಾ, ನೀ ಊರಾಗ ಹಿರೇತನ ಮಾಡಿಕೋತ ಅಡ್ಡಾಡಿದರ ನಾ ಯಾಕಂತ ಕೇಳಿರಲಿಲ್ಲಾ. ಈಗ ಎರಡ ದಿನದಿಂದ ನಾ ಜಾತ್ರಿ ಮಾಡಿಕೊಂಡ ಅಡ್ಡಾಡಿದರ ನಿನ್ನ ಹೊಟ್ಟ್ಯಾಗ ಕಲಹ ಮೂಡಿತು. ಅಂದಮ್ಯಾಲ ನನ್ನ ಪಾಲ ನನಗ ಕೊಟ್ಟಬಿಡು.

ಬಸಂತ : ಎಲೋ ಎಣ್ಣಾ, ನೀ ವರ್ಷಾರ ತಿಂಗಳು ಊರಾಗ ಕಾರಬಾರ ಮಾಡಿಕೋತ ಅಡ್ಡಾಡಿದರ ನಾ ಯಾಕಂತ ಕೇಳಿರಲಿಲ್ಲಾ, ನಾ ಈಗ ಒಂದರೆಡ ದಿನಾ ಕುಸ್ತಿ ಹಿಡಿಕೊಂಡ ಅಡ್ಡಾಡಿದರ ನಿನ್ನ ಹೊಟ್ಟ್ಯಾಗ ಹುಳೀ ಮೂಡೇತಿ; ಅಂದಮ್ಯಾಲ ನನ್ನ ಪಾಲ ನನಗ ಕೊಟ್ಟಬಿಡು.

ಈರ್ಯಾ : ಎಲೋ ತಮ್ಮಗೋಳ್ರಾ, ಲಗಳೇರ ಮನಿತಾನಂದರ ಸುತ್ತ ನಾಕ ಹಳ್ಳಿಗಿ ಪ್ರಸಿದ್ಧ ಐತಿ, ನಾವು ಮೂರೂ ಮಂದಿ ಕೂಡಿದ್ದರ ನಮಗ ಹುಲಿ ಅಂಜಿ ಹಾದೀ ಬಿಡಬೌದು. ಇಂದಃ ನಾವು ಪಾಲಾ ಮಾಡಿಕೊಂಡ ಬ್ಯಾರ್ಯಾದರ ಇಲಿ ಅಂಜಾಕಿಲ್ಲಾ, ಎಚ್ಚರದಿಂದ ಮಾತಾಡುವಂಥವರಾಗಿರಿ.

ಇರಪಕ್ಷಿ : ಎಲೊ ಎಣ್ಣಾ, ನಾವಾದರೂ ಇನ್ನಮ್ಯಾಲ ನೀ ಹೇಳಿಧಾಂಗ ಇರತೇವು. ನಮಗೇನಾದರು ಉದ್ಯೋಗ ಹೇಳುವಂಥವನಾಗು.

ಈರ್ಯಾ : ಎಲೋ ತಮ್ಮಗೋಳ್ರಾ, ಬಳ್ಳಾರಿ ದೇಶದಿಂದ ಪತ್ರ ಬಂದೈತಿ. ನಾನಾದರು ಇಂದ ಮುತ್ತಿನ ವ್ಯಾಪಾರಕ್ಕ ಬಳ್ಳಾರಿ ದೇಶಕ್ಕ ಹೋಗತೇನು. ನೀವಿಬ್ಬರು ಹಿಂದ ಯಾವ ಪ್ರಕಾರ ದನೀನ ವ್ಯವಸ್ಥಾ, ಮನೀ ವ್ಯವಸ್ಥಾ ಮಾಡಿಕೊಂಡ ಬಂದಿದ್ದಿರಿ; ಅದಃ ಪ್ರಕಾರ ಮಾಡಿಕೊಂಡ ನಡೀರಿ.

ಬಸಂತ : ಎಲೋ ಎಣ್ಣಾ, ನಾವಾದರು ನೀ ಹೇಳಿಧಾಂಗ ನಡೀತೇವು. ನಿನ್ನ ಹೇಂತಿ ಗಂಗಿಗೆ ಏನ ಬುದ್ಧಿ ರೀತಿ ಹೇಳೋದ ಹೇಳಿ ಹೋಗುವಂಥವನಾಗು.

ಈರ್ಯಾ : ಆಕಿಗಿ ಹೇಳೋದ ಹೇಳೇನಂತ, ಎಲೋ ತಮ್ಮಾ ಇರಪಕ್ಷಿ, ನೀನಾದರು ಮೇಲ್ಮನಿ ಪರಮ್ಮನ್ನ ಕರಕೊಂಬರುವಂಥವನಾಗು. ಎಲೋ ತಮ್ಮಾ ಬಸವಂತಾ, ನೀನಾದರು ಹೋಗಿ ನನ್ನ ಜೋಡೀ ಒಂದ ಗಂಡಾಳ ಕರಕೊಂಬರುವಂಥವನಾಗು.

ಇರಪಕ್ಷಿ; ಬಸವಂತ : ಎಲೋ ಎಣ್ಣಾ ನೀ ಹೇಳಿಧಾಂಗs ಆಗಲಿ.

*(ನಮಸ್ಕರಿಸಿ ಇಬ್ಬರೂ ಒಂದೊಂದು ದಿಕ್ಕಿಗೆ ಹೋಗುವರು)*

ಈರ್ಯಾ : ಎಲೇ ಗಂಗಿ ಇತ್ತಕಡೆ ಬರುವಂಥವಳಾಗು.

ಗಂಗಿ : *(ನರ್ತಿಸುತ್ತ ಬರುವಳು)*
**ಕರಸೀದ ಕಾರಣೇನೊ ಕಾಂತಾ**
**ಹರುಷದಿಂದಲಿ|**
**ಸರಸಿಜದೊಲು ನಯನಾ ||ಪ||**

**ಪ್ರಿಯಾ ನಿಮಗೆ**
**ಕೈಯಾ ಮುಗಿವೆ ||**

**ಎಳಿ ಬಾಳಿಯೊಲು**
**ಸುಳಿದಾಡುತ ||**

ಗುಣವಂತಾ, ಏನ ಕಾರಣ ಕರಸಿದಿ? ಚಂದವಾಗಿ ಹೇಳುವಂಥವನಾಗು.

ಈರ್ಯಾ : ಎಲೇ ಗಂಗಿ : ಬಳ್ಳಾರಿ ದೇಶದಾಗ ವ್ಯಾಪಾರ ಭಾಳ ಜೋರ ಐತಿ. ನಾನಾದರು ವ್ಯಾಪಾರಕ್ಕೆ ಹೋಗುತೇನು. ಎಲ್ಲಾಕಡೆ ನೆದರಿಟ್ಟ ಚೆನ್ನಾಗಿರುವಂಥವಳಾಗು

ಗಂಗಿ : ಗುಣವಂತಾ, ಮದಿವ್ಯಾಗಿ ಇನ್ನs ಬಾಳ ದಿನಾ ಆಗಿಲ್ಲ. ಇನ್ನs ಒಂದ ಹಡೀಲಿಲ್ಲ. ಹಿಂಗಲಿಲ್ಲಾ. ನನ್ನ ಧ್ಯಾಯ ಕಂದಿಲ್ಲಾ. ಸಣ್ಣ ಬಾಲಿ ನಾ ಒಬ್ಬಾಕಿ ಹೆಂಗಿರಲಿ?

ಈರ್ಯಾ : ಎಲೇ ಗಂಗಿ, ವ್ಯಾಪಾರದ ಗಾಳಿ ಯಾವ ಕಾಲಕ್ಕ ಯಾವ ಕಡೆ ಬೀಸೀತಂತ ಹೆಂಗ ಹೇಳೋದಾ? ಹಂಗಾಮದ ಗಾಳಿ ಬೀಸಿದಾಗ ತೂರಿಕೊಂಡ ಕಡೀಕಾಗ ಬೇಕು. ಹಟ ಹಿಡೀಬ್ಯಾಡ ಅಂತೀದ್ದನ್ನೋಡು.

ಗಂಗಿ : ಗುಣವಂತಾ ಮೂರಂತಸ್ತಿನ ಈ ದೊಡ್ಡಮನ್ಯಾಗ ಚಿಕ್ಕ ಪ್ರಾಯದ ನನ್ನೊಬ್ಯಾಕೀನ ಬಿಟ್ಟ ಹೋದೇನಂತಿ, ಇದೆಂಥಾ ಮಾತ?

ಈರ್ಯಾ : ಎಲೇ ಗಂಗಿ ಯಾಕ ಚಿಂತಿ ಮಾಡತಿ? ಮೇಲ್ಮನಿ, ಪರಮ್ಮ ನಿನ್ನ ಜೋಡೀಗಿ ಇರತಾಳು. ಬಳ್ಳಾರಿಗಿ ಹೋಗಿ ಮುತ್ತಾರತ್ನ ತರತೇನು. ನಿನಗ ಯಾವುದರಾಗ ಏನ ಕಡಿಮ್ಯಾಗೇತಿ ಹೇಳುವಂಥವಳಾಗು.

ಗಂಗಿ : ಗುಣವಂತಾ, ಎಷ್ಟು ಮುತ್ತರತ್ನ ಇದ್ದರ ಗಂಡನ ಸಮ ಬಂದಾವೇನು?

ಈರ್ಯಾ : ಎಲೇ ಗಂಗಿ, ವ್ಯಾಪಾರಕ್ಕ ಹೊಂಟ ವ್ಯಾಳ್ಯಾದಲ್ಲಿ ಅಡ್ಡ ಮಾತ ಆಡಬ್ಯಾಡ. ಊರಾಗ ದೇವರ ಜಾತ್ರಿ ನಡದೈತಿ. ಮರಡಿ ಬಸವಣ್ಣಂದರ ನಮ್ಮ ಮನೀ ದೇವರು. ಕಾಯಿಕಪ್ಪರಾ, ಎಡಿ ಲೋಬಾನ ತಗೊಂಡು, ದೇವರಿಗ್ಹೋಗಿ ಗಂಡಫಲ ಬೇಡಿಕೊಂಡ ಬರವಂಥವಳಾಗು.

ಗಂಗಿ : ಗುಣವಂತಾ, ನಾ ಹೇಳಿದ ಮಾತ ನಿನಗ ತಿಳಿದ ಬರಲಿಲ್ಲಾ. ಹಿಡದ ಹಟ ನೀ ಏನು ಬಿಡಲಿಲ್ಲಾ.

ಈರ್ಯಾ : ಎಲೇ ಗಂಗಿ, ಮತ್ತಾದರು ಹೇಳುತ್ತೇನೆ ಕೇಳು.

ಗಂಗಿ : ಗುಣವಂತಾ, ಆಗದಿ ಚಂದವಾಗಿ ಹೇಳುವಂಥವರಾಗಿರಿ.

ಈರ್ಯಾ : **ಬುತ್ತಿ ಕಟ್ಟ ಗಂಗಾ ನೀನಾ**
**ತಡ ಮಾಡೋದ್ಯಾಕ**
**ಹೋಗತೇನ ವ್ಯಾಪಾರಕ**
**ಕೇಳ ಗಂಗಾ ನೀನಾ ||**

**ಬಳ್ಳಾರಿ ಸಾವ್ಕಾರ**
**ಬರದಾನ ಪತ್ತರಾ**
**ಬರದಾನ ಪತ್ತರಾ**
**ತಿಳಿವಾತ ಮಜಕೂರಾ**
**ಪತ್ರ ಬಂದೀತ ನನಗಾ**
**ತಡ ಮಾಡೋದ್ಯಾಕ ||**

**ಗಂಟ ತೆಲಿಯ ಮ್ಯಾಲ**
**ವ್ಯಾಪಾರ ಭಾಳ ಜೋರಾ**
**ಇರಪಕ್ಷಿ ಬಸವಂತಾ**
**ಅವರು ಹೇಳಿದ ಮಾತಾ**
**ಕೇಳಿಕೊಂತ ಇರ ಸುಮನಾ**
**ತಡಮಾಡೋದ್ಯಾಕ ||**
*(ಇರಪಕ್ಷಿ ಬ್ಯಾಗಾರಿ ಬರುವನು)*

ಇರಪಕ್ಷಿ : ಎಲೊ ಎಣ್ಣಾ, ನಿನ್ನ ಹೇಳಿಕಿ ಪ್ರಕಾರ ನಾನಾದರು ಗಂಡಾಳು ಬ್ಯಾಗಾರೀನ ಕರಕೊಂಬಂದೇನ್ನೋಡು.

ಈರ್ಯಾ : ಎಲೋ ತಮ್ಮಾ ಇರಪಕ್ಷಿ ಇವನ ಕೂಲಿ ಏನ ಠರಾವ ಮಾಡೀದಿ?

ಬ್ಯಾಗಾರಿ : ಏನ ಹೆಚ್ಚಿಗಿಲ್ಲ ಈರಪ್ಪಣ್ಣಾ, ದಿನಕ್ಕೆ ಮೂವತ್ತ ರೊಟ್ಟಿ ಮೂರಗಡಿಗಿ ಅನ್ನ, ಮ್ಯಾಲ ಮೂರ ಗಂಗಾಳ ಅಂಬಲಿ ಕೊಟ್ಟರ ಸಾಕ ನೋಡು.

ಈರ್ಯಾ : ಏಲೋ ಬ್ಯಾಗಾರಿ, ಇಷ್ಟೂ ತಿಂದ ಏನ ಮಾಡತಿ?

ಬ್ಯಾಗಾರಿ : ಈರಪ್ಪಣ್ಣಾ, ಇಷ್ಟ ತಿಂದ ನೀ ಎಷ್ಟ ದಿನ ಹೇಳತಿ, ಅಷ್ಟ ದಿನಾ ನಿದ್ದೀ ಮಾಡ್ತೀನ್ನೋಡು.

ಈರ್ಯಾ : ಎಲೇ ಗಂಗಿ, ಬುತ್ತೀ ಗಂಟ ಕೊಡುವಂಥವಳಾಗು

ಗಂಗಿ : ಗುಣವಂತಾ, ಬುತ್ತೀ ಗಂಟ ನಾನಾದರು ತಂದಿದ್ದೇನ್ನೋಡು.

ಈರ್ಯಾ : ಎಲೇ ಗಂಗಿ ನನ್ನ ಕುಡಗೋಲಾ, ಕೊಡ್ಲಿ ಕೊಡುವಂಥವಳಾಗು

ಗಂಗಿ : ಗುಣವಂತಾ, ಎಂದೂ ಇಲ್ಲದ ಇಂದ ಕೊಡ್ಲಿ, ಕುಡಗೋಲಾ ಬೇಡ್ತಿ. ಏನ ಕಾರಣ, ಹೇಳಬೇಕಾದೀತ ನೋಡು.

ಈರ್ಯಾ : ಎಲೇ ಗಂಗಿ, ಮೊದಲಃ ಮುತ್ತ ರತ್ನದ ವ್ಯಾಪಾರ, ಹಾದ್ಯಾಗ ಕಳ್ಳರ ಹಾವಳಿ ಹೆಚ್ಚಾಗೇತಿ. ಬೇಗನೇ ತರುವಂಥವಳಾಗು.

ಗಂಗಿ : ಹಂಗಾದರ ಕುಡಗೋಲಾ ಕೊಡ್ಲಿ ತಾ ಅಂದೇನ ಗುಣವಂತಾ?

ಈರ್ಯಾ : ಹೌದು, ಲಗು ತರುವಂಥವಳಾಗು.

ಗಂಗಿ : ಗುಣವಂತಾ, ನಾನಾದರು ಕೊಡ್ಲಿ, ಕುಡಗೋಲಾ ತಂದೇನ್ನೋಡು.

ಈರ್ಯಾ : ಇತ್ತ ಕಡೆ ಕೊಡುವಂಥವಳಾಗು

ಗಂಗಿ : ಗುಣವಂತಾ, ತಗೊಳ್ಳುವಂಥವರಾಗಿರಿ

ಬ್ಯಾಗಾರಿ : ಈರಪ್ಪಣ್ಣಾ, ನಾ ಬುತ್ತೀ ಗಂಟ ಹೊರತೇನು, ನೀ ಕೊಡ್ಲಿ, ಕುಡಗೋಲಾ ಹೊರುವಂಥವನಾಗು.

ಪರಮ್ಮ : *(ಓಡಿಬಂದು.)*
ದೇವರ ಜಾತ್ರ್ಯಾಗ ಅದ್ಯಾಕ ಕೊಡ್ಲಿ, ಕುಡಗೋಲಾ ಅಂತಿರೋ ನನ್ನ ಮಕ್ಕಳ್ರಾ?

ಬಸವಂತ : *(ಬರುವನು)*
ಎಲೋ ಎಣ್ಣಾ, ನಾನಾದರು ಪರಮ್ಮನ್ನ ಕರಕೊಂಬಂದೇನ್ನೋಡು.

ಈರ್ಯಾ : ಏನ್ಬೇ ಪರಮ್ಮಾ , ನಾ ಬಳ್ಳಾರಿ ದೇಶಕ ವ್ಯಾಪರಕ ಹೋಗುತೇನು — ನೀನಾದರು ಗಂಗಾನ ಜೋಡಿ ನಮ್ಮ ಮನ್ಯಾಗಿರುವಂಥವಳಾಗು, ಬಂದಮ್ಯಾಲ ನಿನಗಾದರು ನಿನ್ನ ಕೂಲಿ ಕೊಡತೇನು.

ಪರಮ : ಗಂಗಾನ ಜೋಡಿ ನಿಮ್ಮ ಮನ್ಯಾಗಿರಲಿ? ಯಾಕ ನೀ ಇರೋದಿಲ್ಲಾ?

ಈರ್ಯಾ: ಎಲೇ ಎಮ್ಮಾ ಹೇಳಿದಷ್ಟು ಕೇಳು.
ಎಲೋ ತಮ್ಮಾ ಇರಪಕ್ಷಿ ಬಸವಂತಾ.
ಚಿತ್ತಗೊಟ್ಟ ಕೇಳ್ರೇನ್ನ ಮಾತಾ,
ಬಳ್ಳಾರಿ ದೇಶಕ್ಕ ನಾ ಹೋಗುತೇನ ಈ ಹೊತ್ತಾ.

ನಾ ಬರೋದು ಪಂಚಮೀ ಸುತ್ತಾ
ನೀವು ಮೂರೂ ಮಂದಿ ಇರಬೇಕ್ರೋ ನಕ್ಕೋತಾ
ಹೊಲಾಮನಿ ಮಾಡಿಕೊತಾ
ಗಂಗಾಗ ಬುದ್ಧೀ ಹೇಳಿಕೋತಾ.
ಎಲೇ ಗಂಗಿ
ಇರಪಕ್ಷಿ ಬಸವಂತಾ ಸಣ್ಣವರು
ಬಲ್ಹಾಂಗ ತಿರುಗುವರು. ಅವರಿಗೆ ಬುದ್ದೀ ರೀತಿ
ಹೇಳಿಕೊಂಡ ನಗನಗತಾ ಇರು.
ಎಲೋ ಬ್ಯಾಗಾರಿ
ನಡಿವಂಥವನಾಗು.

ಪರಮ್ಮ : ನನ್ನ ಮಗನs ಹೋಗವನs ಹೌಂದಲ್ಲ?

ಈರ್ಯಾ : ಹೌಂದೆಬೇ ಎಮ್ಮಾ,

ಪರಮ್ಮ : ಅಲ್ಲೋ ನನ್ನ ಮಗನ, ನನ್ನ ಮುದಕನಂಥಾ ಮುದುಕ ನನ್ನ ಬಿಟ್ಟ ಒಂದಗಳಿಗಿ ಇರಾಣಿಲ್ಲಾ, ನಿನ್ನಂಥಾವ ಹೇಂತೀನ ಬಿಟ್ಟ ಹೋಗತೇನಂತಿಯಲ್ಲೊ!

ಈರ್ಯಾ : ಎಲೇ ಮುದಕಿ, ಹೋಗೋ ವ್ಯಾಳ್ಯಾದಲ್ಲಿ ಅಡ್ಡ ಬಾಯಿ ಹಾಕಬ್ಯಾಡ. ಎಲೋ ಬ್ಯಾಗಾರಿ ನಡಿವಂಥವನಾಗು.

ಬ್ಯಾಗಾರಿ : ಈರಪ್ಪಣ್ಣಾ ನಡಿವಂಥವನಾಗು
*(ಈರ್ಯಾ ಬ್ಯಾಗಾರಿ ಹೋಗುವರು. ಇರಪಕ್ಷಿ ಬಸವಂತ ಇನ್ನೊಂದು ಕಡೆ ಹೋಗುವರು.)*

ಗಂಗಿ : ಏನೇ ಪರಮ್ಮ, ಗಂಡ ವ್ಯಾಪಾರಕ ಹೋದಾ, ಮೈದುನರು ಕುಸ್ತೀ ಹಿಡ್ಯಾಕ ಹೋದರು. ಮರಡಿ ಬಸವಣ್ಣ ಮನೀ ದೇವರಾ. ಜಾತ್ರಿ ನಡದೈತಿ ಅಗ್ಗದೀ ಸಡಗರಾ. ನಿನ್ನ ಕರಕೊಂಡ ದೇವರಿಗಿ ಹೋಗಿ ಕಾಯಿಕಪ್ಪರಾ ಒಡಿಸಿಕೊಂಡ ಬಾ ಅಂತ ಹೇಳ್ಯಾರ ನಮ್ಮವರಾ. ಸರಿಗಿ ಸರಾ ಹಾಕ್ಕೊಂಡ ಅದೇನ ಶಿಂಗಾರ. ಎಮ್ಮಾ ದೇವರಿಗಿ ಹೋಗೋಣು ನಡಿ ಬರಬರಾ.

ಪರಮ್ಮ : ಆಗಲಿ ನನಮಗಳ ಹೊಗೋಣು ನಡಿವಂಥವಳಾಗು
*(ಹೊರಡುವರು.)*

## ಕೂಡಿ ಪಗಡಿ ಆಡೋಣ

*(ಸಂಗ್ಯಾ, ಬಾಳ್ಯಾ ನರ್ತಿಸುತ್ತ ಬರುವರು. ಈಗ ಬಾಳ್ಯಾನ ಉಡುಪು ಬದಲಾಗಿದೆ. ಅವನೂ ಸಂಗ್ಯಾನಂತೇ ಕಾಣಿಸುತ್ತಾನೆ.)*

ಸಂಗ್ಯಾ : **ದೌಲಾದಿಯಲ್ಲೊ ಗೆಳೆಯಾ ನನ್ಹಾಂಗ**
**ಸಾವ್ಕಾರ ಮಗನ್ಹಂಗಾ**
**ಸಂಗ್ಯಾ ಬಾಳ್ಯಾ ಅನ್ನಬೇಕೊ ಊರೊಳಗ||**

**ಯಾತಕ್ಕೇನೂ ಕಡಿಮಿಲ್ಲ ಬಾಳ್ಯಾ ನನಗ**
**ರೊಕ್ಕ ರೂಪಾಯ್ದೊಳಗ**
**ಸಾಯೋತನಕ ಪ್ರೀತಿಯಿರಲಿ ನನ ಮ್ಯಾಗ||**

ಗೆಳೆಯ ಬಾಳಾಣ್ಣಾ, ನನ್ನ ಹಾಂಗ ಡ್ರೆಸ್ ನಿಂದಾತು. ನಿನ್ಹಾಂಗ ಡ್ರೆಸ್ ನಂದಾತು. ಮನಿಗಂತೂ ಬಂದಿವು. ಯಾಕೋ ಹೊತ್ತ ಹೋಗವೊಲ್ದು, ಯಾವುದಾದರೂ ಆಟದ ಹಂಚಿಕೆ ತಗಿ ಅಂತಿದ್ದೇನನ್ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಾವು ಬಂದ ಒಂದ ಚಿಣಿಪಣಿ ಆಟ ಆಡೋಣ ತಗೋ ಅಂತಿದ್ದೇನ್ನೋಡು.

ಸಂಗ್ಯಾ : ಗೆಳೆಯಾ ಬಾಳಣ್ಣಾ, ಚಿಣಿಪಣಿ ಆಟ ಬಂದಯಾರ ಆಡತಾರು?

ಬಾಳ್ಯಾ : ಗೆಳೆಯಾ ಸಂಗಣ್ಣಾ ಯಾರ ಆಡತಾರು?

ಸಂಗ್ಯಾ : ದನಕಾಯೋ ಹುಡುಗರು ಆಡತಾರು, ಈ ಆಟ ನಮಗೆ ಬ್ಯಾಡಾ ಅಂತಿದ್ದೇನ್ನೋಡು.

ಬಾಳ್ಯಾ : ಹಂಗಾದರೆ ಗೆಳೆಯಾ ಸಂಗಣ್ಣಾ. ನಾವು ಬಂದ ಒಂದ ಚೆಂಡಿನಾಟ ಆಡೋಣ ತಗೊ ಅಂತಿದ್ದೇನ್ನೋಡು.

ಸಂಗ್ಯಾ : ಗೆಳೆಯಾ ಬಾಳಾಣ್ಣಾ, ಚೆಂಡಿನಾಟ ಬಂದ ಯಾರ ಆಡತಾರು?

ಬಾಳ್ಯಾ : ಗೆಳೆಯಾ ಸಂಗಣ್ಣಾ ಯಾರ ಆಡತಾರು?

ಸಂಗ್ಯಾ : ಸಣ್ಣ ಸಣ್ಣ ಸಾಲೀ ಹುಡಗೋರ ಆಡತಾರು. ಈ ಆಟ ಬಂದ ನಮಗ ಬ್ಯಾಡಂತಿದ್ದೇನ್ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಚಿಣಿಪಣಿ ಆಟ ಬ್ಯಾಡ. ಚೆಂಡಿನಾಟ ಬ್ಯಾಡ. ನನ್ನ ಹಂತೇಲಿದ್ದ ಮಜಕೂರ ಎಲ್ಲಾ ಮುಗಿದುವು. ನಿನ್ನ ಹಂತೇಲಿದ್ದರ ತಗಿವಂಥವನಾಗು.

ಸಂಗ್ಯಾ : ಗೆಳೆಯಾ ಬಾಳಣ್ಣ, ನಾವು ಬಂದ ಒಂದ ಪಗಡಿ ಆಟ ಆಡೋಣಂತಿದ್ದೇನ್ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣ, ಪಗಡಿ ಆಟದ ಮಜಕೂರ ನಿನಗೆ ಗೊತ್ತಿಲ್ಲೇನೊ?

ಸಂಗ್ಯಾ : ಗೆಳೆಯಾ ಬಾಳಣ್ಣಾ, ಏನಾತು?

ಬಾಳ್ಯಾ : ಏನಾತಂದರ — ಪಗಡಿ ಆಟ ಆಡಿ ಪಾಂಡವರು ಉಣಬಾರದ ಕಷ್ಟ ಉಂಡರು. ಪಡಬಾರದ ಪಾಡ ಪಟ್ಟರು. ಈ ಆಟ ಒಂದು ನಮಗ ಬ್ಯಾಡ ಅಂತಿದ್ದೇನ್ನೋಡು

ಸಂಗ್ಯಾ : ಗೆಳೆಯಾ ಬಾಳಣ್ಣಾ, ಅವರೇನೋ ಜಿದ್ದಿನಿಂದ ಆಡಿರಬೇಕು. ಹೊತ್ತ ಹೋಗಲಾರಕ ಒಂದ ಆಟ ಆಡೋಣಂತಿದ್ದೇನ್ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಹಂಗಾದರ ಆಡೋಣ ಕುಂದ್ರುವಂಥವನಾಗು.

ಸಂಗ್ಯಾ : **ಆಡೋಣ ಬಾ ಬಾಳ್ಯಾ**
**ಜೋಡೀಲಿ ಗೆಳೆಯರಾ**
**ಕೂಡಿ ಪಗಡಿನಾಡೋಣ ||**

**ಹಾಸಂಗಿ ಹಾಸೋಣ**
**ಕವಡೀಯ ಚೆಲ್ಲೋಣ ||**

**ಹಸರು ಹಳದಿ ನಂದು**
**ಕರಿದು ಕೆಂಪವು ನಿಂದು**
**ದಶಾಪಾಶೇಕ ಹೊಡತಾ**
**ಚಕ್ಕಾತೀನಿಗೆ ಕಡತಾ ||**

ಗೆಳೆಯಾ ಬಾಳಣ್ಣಾ, ದಶಾಪಾಶೇಕ ಹೊಡೆತ ನಂದಾಗಿರುವುದು ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ಚಕ್ಕಾತೀನಿಗೆ ಕಡತ ನಂದಾಗಿರುವುದು ನೋಡು.

ಸಂಗ್ಯಾ : ಗೆಳೆಯಾ ಬಾಳಣ್ಣ ನಂದಾಗಿರುವುದು ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣ ನಂದಾಗಿರುವುದು ನೋಡು.

ಸಂಗ್ಯಾ : ನಂದಾಗಿರುವುದು!

ಬಾಳ್ಯಾ : ನಂದಾಗಿರುವುದು!

ಸಂಗ್ಯಾ : ನಂದಾಗಿರುವುದು!

ಬಾಳ್ಯಾ : ಗೆಳೆಯಾ ಸಂಗಣ್ಣಾ, ಮೊದಲ ನಾ ನಿನಗ ಏನ ಹೇಳಿದ್ದಿ?

ಸಂಗ್ಯಾ : ಈಗೇನಾತು?

ಬಾಳ್ಯಾ : ಪಗಡಿ ಆಟದ ಸಲುವಾಗಿ ನನಗ ನಿನಗ ಜಗಳ ಬಂತ ನೋಡು.

ಸಂಗ್ಯಾ : ಜಗಳ ಬಂದರ ಬಿಟಕೊಟ್ಟ ಅಡ್ಯಾಡಕ ಹೋಗೋಣ ನಡಿವಂಥವನಾಗು.
*(ಇಬ್ಬರೂ ಕೈ ಕೈ ಹಿಡಿದು ನರ್ತಿಸುತ್ತ ಹೋಗುವರು.)*

# ನಾವು ಮಾರವಾಡೇರಾ

*(ಮಾರವಾಡಿ ಅವನ ಹಿಂದೊಬ್ಬ ಆಳು ನರ್ತಿಸುತ್ತ ಬರುತ್ತಾರೆ)*

ಮಾರಾವಾಡಿ : **ನಾವು ಮಾರವಾಡೇರಾ**
**ಮುತ್ತು ಮಾಣಿಕದ ಯಾಪಾರ ಮಾಡಾವರಾ||**
**ಗುಜ್ಜರ ದೇಶದವರಾ**
**ಯಾಪಾರ ಮಾಡಾಕ ಬಂದವರಾ||**
**ಶಾರ ಮುಂಬೈದೊಳಗ ನಮ್ಮ ಯಾಪಾರರೇ**
**ಮುತ್ತ ಮಾರತೇವ್ರಿ ದಿನಕ ಒಂದ ಹಜಾರರೇ||**
**ಥರಾ ಥರಾ ನಮನಿ ಅರಿವಿ ತಂದೇವರಿ**
**ಮಕಮಲ್ಲ ಮಂಗ್ಯಾನ ಹೂವ ಮಾರೇವರಿ||**

ಓಹೋ! ನಾವು ನಾಡಮ್ಯಾಲಿನ ಮಾರವಾಡಿಗಳು. ನಮ್ಮ ಹೇಂತಿ ಮಕ್ಕಳಿಗೆ ಇರೋದು ಗುಜರಾತಿ, ನಾವಿಲ್ಲಿ ಮಾರತೇವ್ರಿ ತರತರ ಆರಿವಿ. ಶಾರ ಮುಂಬೈದಾಗ ನಮ್ಮದು ಬೇಪಾರ ನಡಿತಾವರಿ ಅಗ್ಗದೀ ಜೋರದಾರ. ಕರವತಟಿ ದೋತರ, ತರತರ ರುಂಬಾಲ, ಸಾಟೀ ನಂಬರ ಜರಾ ತಗದ ಪೈರಾಣ ನಮ್ಮ ಅಂಗಡ್ಯಾಗ ಏನಿಲ್ಲಾ: ಅದು ದೇಶದಾಗs ಇಲ್ಲ. ದೇಶದಾಗ ಏನೇನ ಅದಾವ, ನಮ್ಮ ಅಂಗಡ್ಯಾಗ ಅದಾವ. ಯಾನಿದು? ಯಾರೋ ನಮ್ಮ ಅಂಗಡೀ ಕಡೆ ಓಡೋಡಿ ಬರತಾವ್? ಓಹೋ, ಸಾವ್ಕಾರ ಸೇಂಗಾಪಾ. ಬಡವ ಬಾಡ್ಯಾ ಬರತಾವ! ಬರ್ರಿ ಬರ್ರಿ ಸಾವ್ಕಾರ ಸೇಂಗಾಪಾ, ಬರ್ರಿ.

*(ಸಂಗ್ಯಾ, ಬಾಳ್ಯಾ ನರ್ತಿಸುತ್ತ ಬರುವರು.)*

ಸಂಗ್ಯಾ : ಏನ್ರಿ, ಸೇಡಜಿ ಅಂಗಡ್ಯಾಗಿದ್ದೀರೇನು?

ಮಾರಾವಾಡಿ : ಯಾಕ, ನಾವ್ ಸತ್ಹಾಂಗ ಕಾಣತಾವೇನು?

ಬಾಳ್ಯಾ : ಗೆಳೆಯಾ ಸಂಗಣ್ಣ, ಸೇಡಜಿ ಸಿಕ್ಕಾನಂತ ಬಂದರ ಹೆಣಾ ಬಂತು, ಅಪಶಕುನಾತು. ಈ ಅಂಗಡ್ಯಾಗ ಯಾಪಾರ ಬ್ಯಾಡ. ನಡಿಯೋ ನಿನ.

ಸಂಗ್ಯಾ : ಗೆಳೆಯಾ ಬಾಳಣ್ಣ, ಈ ಸೇಡಜಿಗೂಳ ಮಾತs ಹಾಂಗ. ಅದನ್ಯಾಕ ಮನಸಿಗಿ ಹಚಿಕೋತಿ, ಬಾರೋ ನಿನ.

ಮಾರವಾಡಿ : ಸೇಂಗಾಪಾ, ಮಣೀ ಕೆಳಗ ತಳಾ ಊರತಾವ್ ?

ಸಂಗ್ಯಾ : ಏನ್ರೀ ಸೇಡಜಿ. ನಾವಾದರು ಮಣೀಮ್ಯಾಲ ಕುಂತೀವಿ ನೋಡ್ರಿ.

ಮಾರವಾಡಿ : ಸೇಂಗಾಪಾ ಏನೇನ ಬೇಡತಾವ್ ?

ಸಂಗ್ಯಾ : ಸೇಡಜಿ, ಕರವತಟಿ  ದೋತರ, ಗ್ವಾಡಂಬಿ ರುಂಬಾಲ, ಮಲ್ ಮಲ್ ಅಂಗಿ, ಜರದ ಶಲ್ಯೆ, ಕಂಟಿಗೋಪಾ, ಮುತ್ತಿನ ಹಾರ — ಇಷ್ಟೂ ಎಲ್ಲಾ ತಗದ ಕೊಡುವಂಥವರಾಗಿರಿ.

ಮಾರವಾಡಿ : ಅರೇ ಹಾಲ ಮನಿಶ್ಯಾ, ಸೇಂಗಾಪಾ ಹೇಳಿದ್ದ ಕೇಳಿಸಿ ಬಂತೇನು?

ಆಳು : ಕೇಳಿಸ್ತು.

ಮಾರವಾಡಿ : ಅಷ್ಟು ಎಲ್ಲಾ ತಗಂಬಾ

ಆಳು : ಸೇಡಜಿ, ನಾನಾದರು ಕರವತಕಟಿ ದೋತರಾ, ಗ್ವಾಡಂಬಿ ರುಂಬಾಲ,  ಮಲ್ ಮಲ್ ಅಂಗಿ, ಜರದ ಶಲ್ಯೆ, ಕಂಟೀ  ಗೋಪಾ, ಮುತಿನ ಹಾರ ಇಷ್ಟೂ ತಂದ ಇಟ್ಟಿದೇನ ನೋಡ್ರಿ.

ಮಾರವಾಡಿ : ಸೇಂಗಾಪಾ ಅಷ್ಟು ಎಲ್ಲಾ ತಗದ ಕೊಟ್ಟೇದೇವು.

ಸಂಗ್ಯಾ : ಇಷ್ಟಕ್ಕೆಲ್ಲಾ ಕಿಮ್ಮತ್ತ ಎಷ್ಟ ಆತರಿ?

ಮಾರವಾಡಿ : ಸೇಂಗಾಪಾ ತೀನಸೇ ರೂಪಾಯಿ, ತೀಸ ಪೈಸೆ ಆತ ನೋಡ್ರಿ.

ಸಂಗ್ಯಾ : ಏನ್ರೀ ಸೇಡಜಿ, ತೀನಸೇ ರೂಪಾಯಿ ತಗೊಳ್ರಿ. ಮ್ಯಾಲಿನ ತೀಸ ಪೈಸಾ ಬಿಡುವಂಥವರಾಗಿರಿ.

ಮಾರವಾಡಿ : ಅರೇ ಸೇಂಗಾಪಾ ತೀನಸೇ ರೂಪಾಯಿ ಬಿಡತೇನು. ಮ್ಯಾಲಿನ ತೀಸ ಪೈಸೆ ಬಿಡಾಕಿಲ್ಲ, ನೋಡು.

ಸಂಗ್ಯಾ : ಹಾಂಗs ಆಗವೊಲ್ದ ಯಾಕ, ಏನ್ರೀ ಸೇಡಜಿ, ರೊಕ್ಕದ ಕೋಟ ಕಳದ ಮನ್ಯಾಗಿಟ್ಟೇನಿ. ಆನಕರ್ಚಿಗೆ ಇರಲೆಂತ ಕಿಸೇದಾಗ ಹತ್ತಿಪ್ಪತ್ತ ರೂಪಾಯಿ ತಂದಿದ್ನಿ. ತೀನಸೇ ರೂಪಾಯಿ ಈಗ ನನ್ನ ಹಂತ್ಯಾಕಿಲ್ಲ. ಮನೀಗಿ ಹೋಗಿ ತಂದುಕೊಡತೇನು. ನಡದೀತೇನ್ರಿ?

ಮಾರವಾಡಿ : ಆರೇ ಸೇಂಗಾಪಾ, ನಮ್ಮ ಅಂಗಡೀ ವ್ಯವಹಾರ ನಿನಗ್ಗೊತ್ತಿಲೇನು? ಇಂದು ರೋಖ ನಾಳೆ ಉದ್ರಿ, ರೊಕ್ಕ ಇಡಬೇಕ್, ಮಾಲ ಒಯ್ಯಬೇಕ್! ನಮ್ಮ  ಮುಂದ ಪಂಟಗಿಂಟ ನಡಿಯಾಕಿಲ್ಲಾ — ಹಾಗಂತ ನಮ್ಮ ಕಲದೇವರ ಅಪ್ಪಣೆ ಆಗ್ಯಾವ.

ಸಂಗ್ಯಾ : ಏನ್ರಿ ಸೇಡಜಿ, ಯಾಳೆ, ಹೊತ್ತಾ ಯಾರಿಗೇನ ಹೇಳಿ ಬರತಾವ? ಅಷ್ಟೂ ವಿಶ್ವಾಸ ಇಲ್ಲದಿದ್ದರೆ ನನ್ನ ಗೆಳೆಯಾ ಬಾಳಣ್ಣನ್ನ ಇಲ್ಲಿ ಕೂರಿಸಿರತೇನು. ಮನೀಗಿ  ಹೋಗಿ ರೊಕ್ಕ ತರತೇನು, ಆದೀತೇನ್ರಿ?

ಮಾರವಾಡಿ : ಅರೇ ಸೇಂಗಾಪಾ, ನಿನ್ನ ಮ್ಯಾಲ ಅಷ್ಟೂ ವಿಶ್ವಾಸ ಇಲ್ಲೇನು? ಬಾಡ್ಯಾ  ಇಲ್ಲೇ ಇರಲಿ, ನಿ ಹೋಗಿ ರೊಕ್ಕಾ ತಗೊಂಬರುವಂಥವನಾಗು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಾ ಬಡವಂತ ನಿನ್ನ ಬೆನ್ನ ಹತ್ತಿದರ ಸೇಡಜಿ ಅಂಗಡ್ಯಾಗ ಅಡವಿಟ್ಟ ಹೊಂಟೇನೊ?

ಸಂಗ್ಯಾ : ಗೆಳಿಯಾ ಬಾಳಣ್ಣಾ. ಅದನ್ಯಾಕಿಷ್ಟ ಮನಸಿಗಿ ಹಚ್ಚಿ ಕೊಳ್ತಿ? ನಾ ಕುಂತರೂ  ಒಂದs, ನೀ ಕುಂತರೂ ಒಂದs, ಹಾಂಗೇನೂ ಎರಡ ತಿಳಿಕೊಬ್ಯಾಡ. ಈಗಿಂದೀಗ ಹೋಗಿ ಹತ್ತ ಮಿನಿಟದಾಗ ಬರತೇನು ಕಾಳಜಿ ಮಾಡಬ್ಯಾಡ.

ಬಾಳ್ಯಾ : ಹಾಂಗಿದ್ದರ ಗೆಳೆಯಾ ಸಂಗಣ್ಣಾ, ನೀನಾದರು ಮನೀಗಿ ಹೋಗಿ ಲಗುs ಬರುವಂಥವನಾಗು.

ಸಂಗ್ಯಾ : ಆಗಲಿ, ಗೆಳೆಯಾ ಬಾಳಣ್ಣ , ನೀ ಹಾ ಅನೂದರಾಗs ಬರತೇನು, ಹಾ ಅನ್ನು.

ಬಾಳ್ಯಾ : ಹಾ…………………….. *(ಸಂಗ್ಯಾ ನರ್ತಿಸುತ್ತ ಓಡುವನು.)*

ಮಾರವಾಡಿ : ಅರೇ ಬಾಡಪ್ಪಾ, ನಾ ಊಟಾ ಮಾಡಿ ಬರತೇವು. ಅಲ್ಲೀತಂಕ ನೀ ಇಲ್ಲೇ ಕೂರವಂಥವನಾಗು. *(ಆಳಿಗೆ)* ಅರೇ ಹಾಲ ಮನಿಶ್ಯಾ, ಈ ಬಾಡ್ಯಾ ಭಾಳ ಬೆರಿಕಿ. ಯಾಳೇ ಸಿಕ್ಕರ ಸಿಗದ ಹಾಕೋ ಪೈಕಿ. ಅಂಗಡಿ ಬಿಟ್ಟ ಎಲ್ಲಿಗೂ ಹೋಗಬ್ಯಾಡ….

ಆಳು : ಸೇಡಜಿ ನಾನಾದರು ಇಲ್ಲೇ ಕುಂತಿರತೇನು. ನೀವಾದರು ಹೋಗಿ ಬರುವಂಥವರಾಗಿರಿ. *(ಮಾರವಾಡಿ ಒಳಗೆ ಹೋಗುವನು.)*

ಬಾಳ್ಯಾ : *(ತನ್ನಲ್ಲಿ)* ಅಡಡಡ! ಸಿಗಬಾರದ ಹಿಂತಾ ಯಾಳೆ ನನಗೆ ಇನ್ನೆಂದ ಸಿಕ್ಕೀತು? ಈ ಆಳ ಮನಿಶ್ಯಾನ ನೀರತರಾಕ ಕಳಸ ಬೇಕು. ಅವ ಬರೂದರೊಳಗs ಸಿಕ್ಕಷ್ಟ ಸಿಗಹಾಕ್ಕೊಂಡ ಓಡಿ ಹೋಗಬೇಕು. ಹೇಂತಿ, ಮಕ್ಕಳಾ ಉಡತೊಡಾಕ ಅರಿವಿಲ್ಲದs ಮನ್ಯಾಗs ಕುಂತಾರು. ಈಗ ದುಡಕೊಂಡರ ಹೇಂತಿ ಮಕ್ಕಳ ಹತ್ತವರ್ಷ ಜಟ್ಟಾದರು ಕಡದೀತು.

*(ಆಳಿಗೆ)*

ಹಾ ಏನಪಾ ಆಳಮನಿಶ್ಯಾ. ಬಾಯಾರಿಕಿ ಭಾಳ ಆಗೇತಿ; ಕುಡ್ಯಾಕೊಂದ ಚರಗಿ ನೀರ ತಂದೀಯೇನು?

ಆಳು : ಏನೋ ಬಾಳಣ್ಣಾ, ಕುಡ್ಯಾಕ ನೀರ ಬೇಕಾದರ ಅಷ್ಟ ಯಾಕ ತಲೀ ಕೆಡಿಸಿ ಕೊಂಡಿ? ಈಗಿಂದೀಗ ತರತೇನು. ಇಲ್ಲೇ ಇರುವಂಥವನಾಗು.

ಬಾಳ್ಯಾ : ಏನಪಾ, ನಾ ಇಲ್ಲೇ ಇರತೇನು, ನೀನಾದರು ಹೋಗಿ ನೀರು
ತರುವಂಥವನಾಗು. *(ಆಳು ಹೋಗುವನು. ಬಾಳ್ಯಾ ಬೇಗ ಬೇಗ ಕೈಗೆ ಸಿಕ್ಕ ಬಟ್ಟೆಗಳನ್ನೆಲ್ಲ ತೆಗೆದುಕೊಳ್ಳುವಂತೆ ಅಭಿನಯಿಸುತ)*

ಇದು ನನ್ನ ಮಗನಿಗೆ, ಇದು ಹೇಂತಿಗೆ, ಇದು ಮಗಳಿಗೆ, ಇದು ಈ ವರ್ಷಕ್ಕೆ, ಇದು ಮುಂದಿನ ವರ್ಷಕ್ಕೆ. ಇದು ಹತ್ತ ವರ್ಷಕ್ಕೆ…. ಸಧ್ಯೇ ಸಾಕು ಈಗ ಓಡತೀನಿ.

*(ಓಡಬೇಕೆನ್ನುವಷ್ಟರಲ್ಲಿ ಮಾರವಾಡಿ ಹೊಯ್ಕೊಳ್ಳುತ್ತ ಬರುವನು.)*

ಮಾರವಾಡಿ : ಅಯ್ಯಯ್ಯೋ, ಬಡವ ಭಾಡ್ಯಾ ನನ್ನ ಅಂಗಡಿ ಲೂಟಿ ಮಾಡತಾನ; ಓಡಿ ಬರ್ಯೋರ್ೕ, ಬರ್ಯೋರ್ೕ……….

*(ಆಳು ಓಡಿಬಂದು ಓಡುತ್ತಿರುವ ಬಾಳ್ಯಾನನ್ನ ಹಿಡಿದು ಹೊಡೆಯುವನು. ಬಾಳ್ಯಾ ಸತ್ತ ಹಾಗೆ ಬೀಳುವನು. ಇಬ್ಬರೂ ಅತ್ತಿತ್ತ ಗಾಬರಿ ಯಾಗಿ ಓಡಾಡುವರು)* ಅರೇ ಹಾಳಾಮನಿಶ್ಯಾ, ಭಾಡ್ಯಾ ಸತ್ತs ಬಿಟ್ಟ ! ಏನ ಮಾಡೋಣು?

**ಆಬ್ಬಬ್ಬ ಇದೇನ ಸೋಜಿಗ ಸುಡಲ್ಯೊ ಈ ಆರಿವಿ**
**ನಾಡಮ್ಯಾಲ ಹೆಂಡಿರು ಮಕ್ಕಳು ಇರೋದು ಗುಜರಾತಿ||**

**ಆಂದಿಲ್ಲ ಆಡಿಲ್ಲ ಬೇದಿಲ್ಲ ಬಡದಿಲ್ಲ**
**ಸತ್ತವರ್ಹಾಂಗ ಬಿದ್ದಾ||**

**ದೇಶದೊಳು ಗುಜರಾತ ನಾಡು**
**ಮಾರತಾವ್ರಿ ಮುತ್ತಾ||**

**ತೋಡ ಹೇಳಿ ಬಾಳ್ಯಾ ಓಡಿ ಹೋಗುವಾಗ**
**ಎಡವಿ ಬಿದ್ದಸತ್ತಾ||**

ಅರೇ ಅರೆ ಪೋಳಿಸರ ಬಂದರ ನನ್ನ ಗತಿಯೇನ್? ನಮ್ಮ ಅಂಗಡಿ ಗತಿಯೇನ್? ಆರೇ ದಾರಿಕಾರಣ್ಣಾ, ದಾರಿಕಾರಣ್ಣಾ ಈ ಹೇಣಾ ಒಯ್ದು ಹೊಳ್ಯಾಗ ಒಗೀತಿ?

*(ಬ್ಯಾಗಾರಿ ಬರುವನು.)*

ಬ್ಯಾಗಾರಿ : ಏನ್ರಿ ಸೇಡಜಿ. ಈ ಹೆಣಾ ಒಯ್ದು ಹೊಳ್ಯಾಗ ಒಗದರ ನನಗೇನ ಕೊಡತೀರಿ ?

ಮಾರವಾಡಿ : ಅಪಾ ಶಂಬೋರಿ ರೂಪಾಯಿ ಕೊಡತೇವು.

ಬ್ಯಾಗಾರಿ : ಕೊಡರಿ ಹಾಂಗಾದರ.

*(ಮಾರವಾಡಿ ಕೊಡುವನು. ಬ್ಯಾಗಾರಿ ನಗುತ್ತ ಬೆನ್ನು ತಟ್ಟುವನು. ಬಾಲ್ಯಾ ಎದ್ದು ಓಡುವನು ಬ್ಯಾಗಾರಿಯೂ ಓಡುವನು.)*

ಮಾರವಾಡಿ : ಅರೇ ಅರೇ ರಂಡೆಗಂಡಾ, ನಿನ್ನ ಹೇಂತಿ ರಂಡಿ ಆಗಲಿ.

ಸಂಗ್ಯಾ : *(ಬರುವನು.)* ಯಾಕ್ರಿ ಸೇಡಜಿ, ಯಾರನ್ನ ಬೈತೀರಿ ?

ಮಾರವಾಡಿ : ಏನ್ರೀ ಸೇಂಗಾಪಾ, ರೊಕ್ಕಾ ತರಾಕ ನೀವು ಅತ್ತ ಹೋದಿರಿ. ನಾವಿತ್ತ ಊಟಕ ಒಳಗೆ ಹೋದಿವಿ. ನಿಮ್ಮ ಗೆಳೆಯಾ ಬಾಡ್ಯಾ ನಮ್ಮಂಗಡಿ ಮಾಲ ಕದ್ದ ತಗೊಂಡ ಓಡೊಡಿಹೋದ. ಹಿಂಗ ಮಾಡಿದರ ಸುಮ್ಮನ ಬಿಡುತೇವೇನ್? ಪೋಲೀಸ, ಪೋಜದಾರನ ಕರಸತೇವ್, ಸರಕಾರಕ್ಕ ಹೇಳತೇವ್, ಹಾಂಗs ಎಲ್ಲಿ ಬಿಡತೇವ್ ? ಭಾಡ್ಯಾ….

ಸಂಗ್ಯಾ : ಏನ್ರಿ ಸೇಡಜಿ, ಬಡವರ ಆಸೇ ಭಾಳ ಕೆಟ್ಟ. ನನ್ನ ಗೆಳೆಯಾ ಕದ್ದರೂ ಒಂದs ನಾ ಕದ್ದರೂ ಒಂದs. ಒಟ್ಟ ಅದೆಷ್ಟಿರುವುದು ಹೇಳುವಂಥವರಾಗಿರಿ.

ಮಾರವಾಡಿ : ಸೇಂಗಪಾ ನಿನ್ನ ಮೋತಿ ನೋಡಿ ಬೀಡತೇವ, ಇಲ್ಲದಿದ್ದರ ಈ ಭಾಡ್ಯಾಗ ಬುದ್ಧೀ ಕಲಿಸತಿದ್ದಿವಿ. ಒಟ್ಟ ನೋಡ್ರಿ , ಕದ್ದ ಮಾಲ, ಕೊಂಡ ಮಾಲ — ಎರಡೂ ಕಿಮ್ಮತ್ ಕೂಡಿಸಿ ಪಾಚಸೇ ರೂಪಾಯಿ, ಪನ್ನಾಸ ಪೈಸೆ ಆತ ನೋಡ್ರಿ.

ಸಂಗ್ಯಾ : ಪಾಚಸೇ ರೂಪಾಯಿ ತಗಿಳ್ರಿ. ಪನ್ನಾಸ ಪೈಸೆ ಸೂಟು ಬಿಡಿರಿ.

ಮಾರವಾಡಿ : ಅರೇ ಸೇಂಗಾಪಾ, ಪಾಚಸೇ ರೂಪಾಯಿ ಬಿಡತಾವ, ಆದರ ಪನ್ನಾಸ ಪೈಸೆ ಬಿಡಾಕಿಲ್ಲ.

ಸಂಗ್ಯಾ : ಹಾಂಗಾದರ ಅಷ್ಟೂ ತಗೊಳ್ಳುವಂಥವರಾಗಿರಿ.

ಮಾರವಾಡಿ : ಕೊಡುವಂಥವರಾಗಿರಿ.

ಸಂಗ್ಯಾ : ಇನ್ನೇನ ಪೋಲೀಸರಿಗಿ ಹೇಳಬ್ಯಾಡ್ರಿ.

ಮಾರವಾಡಿ : ಇನ್ನ ಯಾಕ ಹೇಳೋಣ ? ಹೇಳೋದಿಲ್ಲ, ನಿಶ್ಚಿಂತ ಹೋಗುವಂಥವರಾಗಿರಿ.
*(ಸಂಗ್ಯಾ ನರ್ತಿಸುತ್ತ ಹೋಗುವನು. ಮಾರವಾಡಿ ಹಿಂದೆ ಸರಿಯುವನು.)*

## ಸಂಗ್ಯಾ ಬಾಳ್ಯಾ ಅನ್ನಬೇಕೋ ಊರಾಗ

*(ಸಂಗ್ಯಾ, ಬಾಳ್ಯಾ ರಂಗದ ಒಂದೊಂದು ಮಗ್ಗುಲಿನಿಂದ ಹುಡುಕುತ್ತ ಬರುವರು. ಪರಸ್ಪರ ನೋಡಿ ಓಡಿಹೋಗಿ ತಬ್ಬಿಕೊಳ್ಳುವುರು. ಸಂಗ್ಯಾ ಉತ್ಸಾಹಿತನಾಗುತ್ತಾನೆ. ಬಾಳ್ಯಾ ಸಪ್ಪಗಿದ್ದಾನೆ)*

ಸಂಗ್ಯಾ : ಗೆಳಿಯಾ ಬಾಳಣ್ಣಾ, ರಾಮೇರಾಮಪಾ ರಾಮೇರಾಮ್.

ಬಾಳ್ಯಾ : ಗೆಳಿಯಾ ಸಂಗಣ್ಣಾ, ರಾಮೇರಾಮಪಾ ರಾಮೇರಾಮ್.

ಸಂಗ್ಯಾ : ಗೆಳಿಯಾ ಬಾಳಣ್ಣಾ, ಮತ್ತಾದರು ಹೇಳತೇನ ಕೇಳು.

ಬಾಳ್ಯಾ : ಗೆಳಿಯಾ ಸಂಗಣ್ಣಾ, ಅದೇನು ಚಂದವಾಗಿ ಹೇಳುವಂಥವನಾಗು.

ಸಂಗ್ಯಾ : **ನಿನ್ನ| ಮಾರಿ ನೋಡಿ ಆತೊ ಎಂಟ ದಿನಾ**
**ಹಾ ಮೈತ್ರಾ| ಬ್ಯಾಸರಾದಾವೊ ಗೆಳಿತಾನ ||ಪ||**
**ಕೂಳ| ನೀರವು ಸವಿಯ ಹತ್ತಲಿಲ್ಲೊ**
**ನಿನ್ನ| ಮಾರಿ ಮುಖಾ ಯಾಕ ಬಾಡ್ಯಾವೊ||**
**ಏನ| ಕಾರಣ ಹೇಳೊ ಎನ್ನ ಮುಂದ**
**ಹಾ ಮೈತ್ರಾ| ಬ್ಯಾಸರಾದಾವೊ ಗೆಳಿತಾನ||**

ಎಲೋ ಗೆಳೆಯಾ ಬಾಳಣ್ಣಾ, ನಿನ್ನ ಮಾರೀ ನೋಡಿ ಏಳೆಂಟ ದಿನಾ ಆತು. ನಿನ್ನ ಭೇಟಿ ನನಗಿಲ್ಲಾ, ನನ್ನ ಭೇಟಿ ನಿನಗಿಲ್ಲಾ. ನೀನಾದರು ಇಷ್ಟ ದಿವಸ ಎಲ್ಲಿಗಿ ಹೋಗಿದ್ದಿ? ಹೇಳಬೇಕಾದೀತ ನೋಡು.

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಾನಾದರು ಹ್ವಾರೇಕ ಹೋಗೀನ್ನೋಡು.

ಸಂಗ್ಯಾ : ಎಲೋ ಗೆಳೆಯಾ, ನಿನ್ನ ಮುಖ ಯಾಕ ಬಾಡೆತಿ?

ಬಾಳ್ಯಾ : ಗೆಳೆಯಾ ಸಂಗಣ್ಣಾ,ಬ್ಯಾಸಿಗಿ ಬಿಸಿಲಾಗ ಹತ್ತೀಕಟಿಗಿ ಜೋಡಿ ಗುದ್ಯಾಡಿ ನನ್ನ ಮಾರಿ ಬಾಡೇತಿ ನೋಡು.

ಸಂಗ್ಯಾ : ಏನೋ ಗೇಳೆಯಾ, ಇದೂ ಅಲ್ಲದ ನಿನ್ನ ಮೈಮ್ಯಾಗಿನ ಡ್ರೆಸ್ ಯಾಕ ಚೆಂದ್ಯಾಗ್ಯಾವು?

ಬಾಳ್ಯಾ : ಗೆಳೆಯಾ ಸಂಗಣ್ಣಾ, ನಿನ್ನ ಮುಂದ ಯಾ ಮಾತಂತ ಏನ ಹೇಳಲಿ? ಮನೀ ತುಂಬ ಮಕ್ಕಳು ಕೈಗೊಂದ ಕಾಲಿಗೊಂದ ತಡಕ್ಯಾಡತಾವು. ಮೈ ಮುಚ್ಚಾಕ ಅರಿವಿಲ್ಲ. ಬೀಸಾಕ ಜ್ವಾಳಿಲ್ಲ, ತಿನ್ನಾಕ ಕೂಳಿಲ್ಲ. ಸಾವ್ಕಾರ ಸಾಲಾ, ಶಂಬೋರಿ  ನೂರಾ, ಮನೀಗಿ ಬಂದ ಜಗ್ಯಾಡತಾರ. ಬಡವಪ್ಪಾ ಗೆಳೆಯಾ ನಾನು, ಇನ್ಹ್ವಂಗ ಇದ್ದೇನು?

ಸಂಗ್ಯಾ : ಗೆಳೆಯಾ ಬಾಳಣ್ಣಾ ನೀ ಹೀಂಗಿದ್ದರ ನನ್ನ ಶ್ರೀಮಂತಿಕೆ ಇದ್ದರೆಷ್ಟು, ಬಿಟ್ಟರೆಷ್ಟು? ನಿನ್ನ ನೋಡಿದರ ಊರಾಗಿನ ನಾಕಮಂದಿ ನನಗೇನಂದದಾರು?

ಬಾಳ್ಯಾ : ಸಂಗಣ್ಣಾ ಏನಂದಾರು?

ಸಂಗ್ಯಾ : ಊರಿಗೂರs ಕುಂತ ಉಂಡರೂ ಕರಗದಷ್ಟು ಮನ್ಯಾಗ ಐಸಿರಿ ತುಂಬೇತಿ. ತನ್ನ ಗೆಣಿಕಾರ ಬಾಳಣ್ಣಗ ಕೊಡಾಕ ಒಂದ ಪೈಸಾ ಹುಟ್ಟಲಿಲ್ಲೇನಂತ ಅನ್ನಾಕಿಲ್ಲಾ?

ಬಾಳ್ಯಾ : ಗೆಳೆಯಾ ಸಂಗಣ್ಣ, ನಾ ಅಂದರ ಒಂದ ಪೈಸಾ ಭಿಕ್ಷಾ ಬೇಡೋ ಭಿಕಾರೆಂತ ತಿಳಿದೇನೊ?

ಸಂಗ್ಯಾ : ಗೆಳೆಯಾ ಬಾಳಣ್ಣ. ನನ್ನ ಶ್ರೀಮಂತಿಕೆ ಅಂದರ ನಿನ್ನ ಶ್ರೀಮಂತಿಕೆ ಅಲ್ಲೇನೊ? ನಿನಗೆ ಬೇಕಾದ್ದ ಬ್ಯಾಡಾದ್ದ ಕೊಂಡಿಸಿ ಕೊಡತೇನು. ಕರವತಕಟಿ ದೋತರಾ, ಜರದ ರುಂಬಾಲಾ, ಕಡೆ ತೋಡೆ, ಉಂಗುರ ಉಡದಾರ — ಇದೂ ಅಲ್ಲದ ಕಂಟಿಗೋಪಾ, ಕೊರಳಲ್ಲಿ ಚಂದ್ರಹಾರ — ಇವನ್ನೆಲ್ಲಾ ಕೊಡಸ್ತೇನು. ನನ್ನ ಜೋಡಿ ನಡಿವಂಥವನಾಗು.

ಬಾಳ್ಯಾ : ಗೆಳಿಯಾ ಸಂಗಣ್ಣಾ, ಇಂದ ಕೊಟ್ಟೀ, ನಾಳಿ ಹಂಗೀಸೀ, ಕಡ ತಂದ ಸಡಗರ ಎಷ್ಟ ದಿನದ್ದಾ? ನನಗೇನ ಬ್ಯಾಡ ಅಂತಿದ್ದೇನ್ನೋಡು.

ಸಂಗ್ಯಾ : ಗೆಳೆಯಾ ಬಾಳಣ್ಣ. 'ಗೆಳಿಯಾ ಸಂಗಣ್ಣ, ಗೆಳಿಯಾ ಸಂಗಣ್ಣ' ಅಂತ ಬಾಯ್ಲೆ ಹೇಳತಿ. ಗೆಳೆಯಾ ಅಂತ ಕೊಟ್ರ ಯಾಕ ಒಲ್ಲೆಂತಿ? ಸಂಗ್ಯಾ ಅಂದರ ಸುತ್ತ ಹದಿನಾಕ ಹಳ್ಳಿಗಿ ಪರಸಿದ್ಧ. ನನ್ಹಾಂಗ ನೀ ಇರಬೇಕು. ನಿನ್ಹಾಂಗ ನಾ ಇರಬೇಕು. ಅದನೇನ ಮನಸಿಗಿ ಹಚ್ಚಿಕೊಬ್ಯಾಡ. ಸುಮ್ಮನ ನಡಿವಂಥವನಾಗು.

ಬಾಳ್ಯಾ : ಏನೊ ಗೆಳೆಯಾ, ಮನ್ಯಾಗ ಹೇಂತಿ ಮಕ್ಕಳಿಗಿ ಹೊಟ್ಟಿಗಿಲ್ಲಾ  ಬಟ್ಟಿಗಿಲ್ಲಾ. ನೆತ್ತಿಗಿ ಎಣ್ಣಿಲ್ಲಾ. ನಿನ್ನ ಜೋಡಿ ಬಂದ ಹೌಸೀಲೆ ತಿರಗಂದರ ಹೆಂಗ ತಿರಗಾಕಾದೀತು?

ಸಂಗ್ಯಾ : ಮನಿಮಾರ ಚಿಂತಿ ನಿನಗ್ಯಾಕೊ ಗೆಳೆಯಾ? ಗಾಡಿ ತುಂಬ ಕಾಳ ಹಾಕಸ್ತೇನು — ತಾನಗಟ್ಟಲೆ ಅರಿವಿ ಹಾಕಸ್ತೇನು. ಶಂಬೋರಿ ನೂರ ಸಾವ್ಕಾರ ಸಾಲಾ ಆದರೂ ತೀರಸ್ತೇನು. ಸುಮ್ಮನ ನಡಿವಂಥನಾಗು.

ಬಾಳ್ಯಾ : ಗೆಳಿಯಾ ಸಂಗಣ್ಣ ನಿನ್ನ ನೋಡಿದರೆ — ಹುಡುಗಾ ಕೈಯಾಗ ಕಡೆ ತೋಡೆ ಇಟ್ಟೇದಿ. ಜರದ ರುಂಬಾಲ ಸುತ್ತೀದಿ, ಊರ ಧನಿ ಹಾಂಗ ಕಾಣತಿ. ನನ್ನ ಮೈಮ್ಯಾಲ ಒಂದ ಗಟ್ಟಿ ಅರಿವಿಲ್ಲ , ಮುಖದಾಗ ಒಂದ ಹೌಸಿ ಇಲ್ಲ. ಆದ್ದರಿಂದ ನಾ ಬರೋದಿಲ್ಲಂತಿದ್ದೇನ್ನೋಡು.

ಸಂಗ್ಯಾ : ಬಾಳಣ್ಣಾ, ಅದ್ಯಾವ ದೊಡ್ಡಮಾತೊ? ನನ್ನ ದಿರಿಸು ನೀ ಹಾಕ್ಕೊ, ನಿನ್ನ ದಿರಿಸು ನನಗ ಕೊಡು, ನಡಿವಂಥನಾಗು.

ಬಾಳ್ಯಾ : ಗೆಳಿಯಾ ಸಂಗಣ್ಣ, ಡ್ರೆಸ್ ಅದಲಿ ಬದಲಿ ಮಾಡಿದರೇನ ಭಾಗ್ಯ ಬಂಧಾಂಗಾಯ್ತು? ನೀ ಬಡವಾಗಲಿಲ್ಲ, ನಾ ಸಾವ್ಕಾರ ಆಗಲಿಲ್ಲ. ನಿನ್ನ ಡ್ರೆಸ್ ನಿನ್ನ ಮೈಮ್ಯಾಲs  ಇರಲಿ. ನನ್ನ ಡೆಸ್ ನನ್ನ ಮೈಮ್ಯಾಲs ಇರಲಿ. ನಾನಾದರು ಬರತೇನು ಹೋಗೋನ್ನಡೀವಂಥನಾಗು.

ಸಂಗ್ಯಾ : **ನಡಿ ಬಾಳ್ಯಾ ಹೋಗೋಣು ಪ್ಯಾಟ್ಯಾಗ**
**ಮಾರವಾಡಿ ಅಂಗಡ್ಯಾಗ**
**ಹೊಸಾ ತರದ ಅರಿವಿ ಬಂದಾವೊ ಈಗ||**
**ಡೌಲಾಗಬೇಕೊ ಗೆಳಿಯಾ ನನ್ಹಾಂಗ**
**ಸಾವ್ಕಾರ ಮಗನ್ಹಾಂಗಾ**
**ಸಂಗ್ಯಾ ಬಾಳ್ಯಾ ಅನ್ನಬೇಕೊ ಊರಾಗ||**
**ಶೈನಶೋಕ ಕೊಂಡಕೊಡುವೆ ಬಾಳ್ಯಾ ನಿನಗ**
**ಇರಲೆಪ್ಪಾ ಮೈಯ ಮ್ಯಾಗ**
**ಸಾಯೋತನಕಾ ಪ್ರೀತಿಯಿರಲಿ ನನ್ನ ಮ್ಯಾಗ||**
**ಯಾತಕ್ಕೇನೂ ಕಡಿಮಿಲ್ಲೊ ಬಾಳ್ಯಾ ನನಗ**
**ಹಾಲ ಹೈನದ ಒಳಗ**
**ಶಿವಾ ಕೊಟ್ಟ ಮರತಾನಪ್ಪ ಭೂಮಿಮ್ಯಾಗ||**
**ಬೆಳ್ಳಿ ಬಂಗಾರ ಮಸ್ತ ಐತ್ಯೋ ಮನಿಯಾಗ**
**ರೊಕ್ಕ ರೂಪಾಯ್ದೊಳಗ**
**ತಾಯಿ ತಂದಿ ಭಾಳ ಪ್ರೀತ್ಯೋ ನನ್ನ ಮ್ಯಾಗ||**
*(ನರ್ತಿಸುತ್ತ ಹೋಗುವರು)*

## ಹುಡುಕಲಿನ್ನೆಲ್ಲಿ

*(ಬಾಳ್ಯಾ , ತನ್ನ ಗೆಳೆಯ ಸಂಗ್ಯಾನನ್ನು ಹುಡುಕುವಂತೆ ಆಭಿನಯಿಸುತ್ತ ಬರುವನು)*

ಬಾಳ್ಯಾ : **ಹುಡುಕಲಿನ್ನೆಲ್ಲಿ ನೋಡಲಿನ್ನೆಲ್ಲಿ**
**ಎನ್ನ ಗೆಳೆಯನಾ**
**ಸಾವ್ಕಾರ ಸಂಗ್ಯಾನ ||ಪ||**
**ಓಣ್ಯೋಣಿ ತಿರುಗುತ ಬಂದೇನ ಲಗುಮಾಡಿ**
**ಎನ್ನ ಬಿಟ್ಟ ಅಗಲಿ ಹೋದಾನೊ ದಾವಲ್ಲಿ||**
**ಲಂಗೋಟಿ ಗೆಳಿತಾನ ಅಗಲುದು ಬ್ಯಾಡಿನ್ನ**
**ಎಲ್ಲಿ ಹುಡುಕಲಿ ನನ್ನ ಬಲ್ಲಿದ ಗೆಳೆಯಾನ||**

ಓಹೋ! ನನ್ನ ಗೆಳೆಯಾ ಸಂಗಣ್ಣ ಹೋಗಿ ಇಂದಿಗಿ ಎಂಟ ದಿನಾ ಆದುವು. ಅವನ ಭೇಟಿ ನನಗಿಲ್ಲಾ ನನ್ನ ಭೇಟಿ ಅವನಿಗಿಲ್ಲಾ. ಹಿಂಗs ಹುಡುಕುತ್ತಾ ಹೋದರ ಅವನೆಂದೂ ಸಿಗಾಕಿಲ್ಲಾ. ಇಲ್ಲಿ ಒಬ್ಬ ಹಿರ್ಯಾ ನಿಂತಾನ. ಅವನ್ನಾದರು ಕೇಳಿ ನೋಡೋಣು. ಏನಪಾ ಹಿರ್ಯಾ….

ಮೇಟಿತಾಳ : ಹಾ.

ಬಾಳ್ಯಾ : ನನ್ನ ಗುರುತ ಸಿಗಲಿಲ್ಲೇನಪಾ?

ಮೇಟಿತಾಳ : ಏನಪಾ ನಿನ್ನ ಗುರುತು ಸಿಗಲಿಲ್ಲ ನೋಡು.

ಬಾಳ್ಯಾ : ಬಡವನ ಗುರುತಾ ಬೆನ್ನಿಗಿ ಬಿದ್ದ ಅಣ್ಣ ತಮ್ಮರs  ಹಿಡಿಯೋದಿಲ್ಲ, ನಿನಗ್ಹೆಂಗೆ ಸಿಕ್ಕಿತು?

ಮೇಟಿತಾಳ : ಏನೋ ಹುಡುಗಾ, ಮನಿ ಪ್ಯಾಟ್ಯಾಗ ಹರಕ ದೋತರ ಉಟಗೊಂಡ ತುಂಡ ಬೀಡಿ ಆರಿಸಿಕೊಂಡ ಅಡ್ಡಾಡತಿದ್ದಿ: ನೀನs ಅಲ್ಲಾ?

ಬಾಳ್ಯಾ : ಏನಪಾ, ಅವನೆಲ್ಲಾದರು ನಿನ್ನ ಮಗ ಆಗಿದ್ದಾನು, ಬರೋಬರಿ ಗುರುತ ಹಿಡಿ ಅಂತಿದ್ದೇನ್ನೋಡು.

ಮೇಟಿತಾಳ : ಏನಪಾ, ನಿನ್ನಿ ಏನೋ ತುಡುಗ ಮಾಡಿ ಕೈಯಾಗ ಕಾಲ್ಮರಿ ಹಿಡಕೊಂಡ ಓಡುತ್ತಿದ್ದಿ. ನೀನs ಅಲ್ಲೇನ?

ಬಾಳ್ಯಾ : ಅವನೆಲ್ಲಾದರು ನಿನ್ನ ತಮ್ಮ ಆಗಿದ್ದಾನು, ಬರೋಬರಿ ಗುರುತ ಹಿಡಿ ಅಂತಿದ್ದೇನ್ನೋಡಪಾ.

ಮೇಟಿತಾಳ : ಹಾಂಗಿದ್ದರ ನನಗೇನ ನಿನ್ನ ಗುರುತ ಸಿಗಲಿಲ್ಲ. ನೀನ ಹೇಳಂತಿದ್ದೇನ್ನೋಡು.

ಬಾಳ್ಯಾ : ಏನಪಾ ಹಿರ್ಯಾ. ನಾ ಬಂದ ಬೈಲಹೊಂಗಲದಾಗಿನ ಒಬ್ಬ ಬಡವ ಅಂತ ತಿಳಿಕೊ.

ಮೇಟಿತಾಳ : ಏನಪಾ, ಬೈಲಹೊಂಗಲದ ಬಡವರಿಗೆ ಹೆಸರ ಇರೋದಿಲ್ಲೇನು?

ಬಾಳ್ಯಾ : ನನಗ ಬಂದ ಬಡವ ಬಾಳ್ಯಾ, ಬಡವ ಬಾಳ್ಯಾ ಅಂತಾರ ನೋಡು.

ಮೇಟಿತಾಳ : ಏನಪಾ, ನೀ ಬಡವ ಬಾಳ್ಯಾ ಅನ್ನೋದು ನನಗಾದರು ತಿಳೀತು, ಕುಂತ ಮಂದಿಗಾದರು ತಿಳಿದಬಂತು. ಬಡವ ಬಾಳಣ್ಣ ನನ್ನ ಕರದಂಥಾ ಕಾರಣೇನು?

ಬಾಳ್ಯಾ : ಏನೋ ಹಿರ್ಯಾ, ನನ್ನ ಗೆಳೆಯಾ ಸಾವ್ಕಾರ ಸಂಗಣ್ಣನ ನೋಡಿದ್ದರ ಹೇಳ ಬೇಕಾದೀತ ನೋಡು.

ಮೇಟಿತಾಳ : ಬಡವ ಬಾಳಣ್ಣ, ಸಾವ್ಕಾರ ಸಂಗಣ್ಣಂದರ ಯಾರಂತ ನನ್ನಗ್ಗೊತ್ತಿಲ್ಲಾ. ಖೂನಾ ಗುರುತಾ ಹೇಳಿದರ ಹೇಳೇನ್ನೋಡು.

ಬಾಳ್ಯಾ : ಹತ್ತೂ ಬೆಳ್ಳಗಿ ಹತ್ತ ಉಂಗುರಾ ಇಟ್ಟಗೊಂಡ, ತಲಿಮ್ಯಾಲ ಜರದ ರುಂಬಾಲ ಸುತ್ತಿಕೊಂಡ, ನಡಕೊಂಡ ಬಾರೋ ಆಂದರ ಕುಣಕೋತ ಬರತಾನು,  ಮಾತಾಡಿಕೊಂಡ ಬಾ ಅಂದರ, ಹಾಡಿಕೋತ ಬರುವಂಥಾ ಚಿಗರಮೀಸಿ ಹುಡುಗ ಯಾವನಾದರೂ ಇದ್ದರ, ಅವನs ಸಾವ್ಕಾರ ಸಂಗ್ಯಾ ಅಂತ ತಿಳಿ  ನೋಡು.

ಮೇಟಿತಾಳ : ಛೇ ಛೇ, ಹಿಂತಾ ಹುಡುಗನ್ನ ನಾ ಏನ ನೋಡಿಲ್ಲಾ. ಕೆಳಗಿನ ಪ್ಯಾಟಿಗಿ ಹೋಗಿ ನೋಡಿದರೆ ಸಿಕ್ಕಾನ ನೋಡು.

ಬಾಳ್ಯಾ : ಏನಪಾ, ನಾನಾದರು ಕೆಳಗಿನ ಪ್ಯಾಟಗಿ ಹೋಗತೇನು, ನೀನಾದರು ಹೋಗುವಂಥವನಾಗು.

*(ಮೇಟಿತಾಳ ಹಿಂದೆ ಸರಿಯುವನು. ಬಾಳ್ಯಾ ರಂಗದ ಒಂದು ಮಗ್ಗಲಿಗೆ ಮತ್ತೆ ಹುಡುಕುತ್ತ ಸರಿಯುವನು.)*

## ಗೆಳೆಯ ಹೋಗಿದಾನೋ ಎನ್ನಗಲಿ

*(ಸಂಗ್ಯಾ ರಂಗದ ಇನ್ನೊಂದು ಬದಿಯಿಂದ ಬಾಳ್ಯಾನ ಶೋಧನೆಯನ್ನ ನೃತ್ಯದಲ್ಲಿ ಅಭಿನಯಿಸುತ್ತ ಬರುವನು)*

ಸಂಗ್ಯಾ : **ಬಾಳ್ಯಾ ಹೋಗಿದಾನೋ ಎನ್ನಗಲಿ**
**ಎಲ್ಲೆಂತ ಹುಡುಕಲಿ**
**ದಿನಾ ಬಂದ | ಕುಂಡ್ರಾವೊ ಎನ್ನ ಬದಿಯಲ್ಲಿ||**
**ನೋಡಿದರ ಹೋಗಿ ನೆಟ್ಟಗ**
**ಇದ್ದಿಲ್ಲೊ ಮನಿಯಾಗ**
**ಸಿಟ್ಟ ಆದನಪ್ಪಾ | ಗೆಳೆಯಾ ತನ್ನ ಮನದಾಗ||**
**ಎನ್ನ ಬಿಟ್ಟ ಹೋಗ —**
**ತಿದ್ದಿಲ್ಲೋ ಹೋದಲ್ಲಿ ಬಂದಲ್ಲಿ**
**ಎತ್ತ ಹೋದನಪ್ಪಾ | ಜೀವನದ ಗೆಳೆಯಾ ಬಾಳಣ್ಣಾ||**

ಓಹೋ! ನನ್ನ ಗೆಳೆಯಾ ಬಾಳಣ್ಣಾ ಹೋಗಿ ಏಳೆಂಟ ದಿನಾ ಆಯ್ತು. ಅವನ ಭೇಟಿ ನನಗಿಲ್ಲಾ, ನನ್ನ ಭೇಟಿ ಅವನಿಗಿಲ್ಲಾ. ಹಿಂಗs ಹುಡುಕುತ್ತಾ ಹೋದರ ಅವನೆಂದಿಗೂ ಸಿಗಾಕಿಲ್ಲ. ಇಲ್ಲೊಬ್ಬ ಹಿರ್ಯಾ ಕಾಣತಾನು. ಅವನ್ನಾದರು ಕೇಳಿ ನೋಡೋಣ. ಏನಪಾ ಹಿರ್ಯಾ, ಇತ್ತ ಕಡೆಗೆ ಬರುವಂಥವನಾಗು.

ಮೇಟಿತಾಳ : ಏನಪಾ ಯಾಕ್ಕರದಿ?

ಸಂಗ್ಯಾ : ನನ್ನ ಗುರುತ ಸಿಗಲಿಲ್ಲೇನ?

ಮೇಟಿತಾಳ : ನಿನ್ನ ಗುರುತ ನನಗೇನೂ ಸಿಗಲಿಲ್ಲಾ, ಕುಂತ ಮಂದಿ ಹೌಂದನ್ನೋ ಹಾಂಗ ಗುರುತಾ ಹೇಳುವಂಥವನಾಗು.

ಸಂಗ್ಯಾ : ನನಗೆ ಬಂದ ಸಾವ್ಕಾರ ಸಂಗ್ಯಾ ಅಂತಾರ ನೋಡು.

ಮೇಟಿತಾಳ : ಸಂಗಣ್ಣಾ. ನೀ ಯಾರಂತ ನನಗಾದರೂ ತಿಳೀತು, ಕುಂತ ಮಂದಿಗಾದರು ತಿಳೀತು. ನನ್ನ ಕರದ ಕಾರಣೇನು?

ಸಂಗ್ಯಾ : ಏನಪಾ ಹಿರ್ಯಾ, ನನ್ನ ಗೆಳೆಯಾ ಬಡವ ಬಾಳ್ಯಾನ್ನ ನೋಡಿದ್ದರ ಹೇಳಬೇಕು ನೋಡು.

ಮೇಟಿತಾಳ : ಅಲ್ಲಪಾ, ನೀ ನೋಡಿದರ ಸಾವ್ಕಾರ ಸಂಗ್ಯಾ, ಅವನ್ನ ನೋಡಿದರ ಬಡವ ಬಾಳ್ಯಾ. ಹಾಲಿಗೆ, ನೀರಿಗೆ ಇಂಥಾ ಗಟ್ಟಿಮುಟ್ಟ ಗೆಳಿತಾನ ಐತೆಂದ ಮ್ಯಾಲ ಇದರಾಗೇನೋ ಗುಟ್ಟು ಇರಾಕ ಬೇಕ. ಅದೇನ ಹೇಳಬೇಕ ನೋಡು.

ಸಂಗ್ಯಾ : ಸಂಗ್ಯಾ ಬಾಳ್ಯಾ ಜೋಡಿ ಅಂದರ ಸುತ್ತ ಹದಿನಾಲ್ಕು ಹಳ್ಳೀ ಒಳಗ ಪರಸಿದ್ಧ. ಚಿಕ್ಕಂದಿರತ ಇಬ್ಬರೂ ಕೂಡಿ ಸಾಲಿ ಬರದವರು. ನಾಕೂ ಬೆರಳಿಗಿ ನಾಕ ಉಂಗುರಾ ಇಟ್ಟುಕೊಂಡು ಚಪ್ಪಾಳೆ ಹೊಡೆದು ನಕ್ಕವರು ಹೆಂಗಸರು ನೀರ ತರೋ ಹಾದ್ಯಾಗ ನಿಂತ ದಿಗರ ಮಾತಾಡಿ ಹುಬ್ಬ ಹಾರಿಸಿದವರು. ಅವ ಬಡವಾದರೇನು? ನಾ ಶ್ರೀಮಂತ ಆದರೇನು? ಗೇಳಿತಾನಂದರ ಗೆಳಿತಾನಪಾ.

ಮೇಟಿತಾಳ : ಹಂಗಾದರ ನಿನ್ನ ಗೆಳಿಯಾ ಬಾಳಣ್ಣ ನಿನ್ನ ಹುಡಿಕ್ಕೊಂಡ ಕೆಳಗಿನ ಪ್ಯಾಟಿಗೆ ಹೋಗಿದಾನು. ನೀನಾದರು ಅಲ್ಲಿಗೆ ಹೋಗುವಂಥವನಾಗು.

ಸಂಗ್ಯಾ : ಕೆಳಗಿನ ಪ್ಯಾಟಿಗಿ ಹೋದರ ಸಿಕ್ಕಾನ, ಹೌಂದಲ್ಲ?

ಮೇಟಿತಾಳ : ಅದದೀ ಅದತ್ಯವಾಗಿ ಸಿಗತಾನ ಹೋಗು.

*(ಮೇಟಿತಾಳ ಹಿಂದೆ ಸರಿಯುವನು. ಸಂಗ್ಯಾ ಮತ್ತೆ ಹುಡುಕುವುದನ್ನಭಿನಯಿಸುತ್ತ ಹೋಗುವನು.)*

***